...ಕರವು 'ಹ'

ಪಂಚಮ

ಸಂಪುಟ : 7 ಸಂಚಿಕೆ : 11 ಮೇ 20 - ಜೂನ್ 5, 1983 ಬೆಲೆ : 50 ಪೈಸೆ ಪುಟ : 12

ಈ ಸಂಚಿಕೆಯಲ್ಲಿ

ನಿಲ್ಲುವ ನೆಲೆಗಾಗಿ ಬಡಜನರು ನಡೆಸಿರುವ ಹೋರಾಟ

ಕೆಳಗಿನ ಚಿತ್ರದಲ್ಲಿ ದೊಣ್ಣೆಯೂರಿಕೊಂಡು ಭೂಮಿ ಮತ್ತು ಆಕಾಶವನ್ನು ನೋಡುತ್ತಿರುವ ಮುದುಕ ನಮ್ಮ ರಾಜಧಾನಿ ಬೆಂಗಳೂರಿಗೆ 30 ಕಿ. ಮಿ. ದೂರದ ದೊಡ್ಡಬಳ್ಳಾಪುರ ತಾಲ್ಲೂಕಿನ ತಿಮ್ಮಸಂದ್ರದವ. ತನ್ನ ಆಯುಸ್ಸಿನುದ್ದಕ್ಕೂ ಅನುಭವಿಸಿದ ಹಸಿವು ಅಸ್ಪೃಶ್ಯತೆ ಅನಾಥತೆ ಅವಮಾನಗಳ ಗೂಡಿನಿಂದ ಹೊರಬಂದು ನಿಂತಂತಿರುವ ಈತ ಹೊಸ ಬದಲಾವಣೆಯನ್ನು, ಹೊಸ ನೆಲೆಯನ್ನು, ಹೊಸ ವಸತಿಯನ್ನು ಗುರುತಿಸಿದಂತೆ ಕಾಣುತ್ತಿದೆ. ಆದರೆ ಕ್ರೌರ್ಯಕ್ಕೆ ಹುಟ್ಟಿದ ಜಮೀನುದಾರ, ಎಂಜಲಿಗೆ ಹುಟ್ಟಿದ ಪೋಲೀಸ್ ಮತ್ತು ಸರ್ಕಾರ-ಇವು ಈತನ ಆಕಾಂಕ್ಷೆಗಳಿಗೆ ತಡೆಯಾಗಿ ನಿಂತಿವೆ. ಇಂಥದೇ ಹಂದಿಗೂಡುಗಳಂಥ ಅಂಗೈಯಗಲದ ಗುಡಿಸಲುಗಳಲ್ಲಿ ಜೀವಮಾನಗಳನ್ನು ಕಳೆಯುತ್ತಿರವ ತಿಮ್ಮಸಂದ್ರದ 59 ಕುಟುಂಬಗಳು ಇದೇ ಸ್ಥಿತಿಯಲ್ಲಿ ನಿರಾಶೆಯಲ್ಲಿ ನಿಂತಿವೆ. ಆದರೆ-ದಲಿತ ಸಂಘರ್ಷ ಸಮಿತಿ ಈ ಜನರಲ್ಲಿ ಆಶೆ ಮೂಡಿಸಿದೆ. ಇವರ ಸೈಟುಗಳು ಸಿಕ್ಕಿಯೂ ದಕ್ಕದಂತೆ ಮಾಡುತ್ತಿರುವ ಭೂಮಾಲೀಕರು, ಪೋಲೀಸು ಮತ್ತು ಕಾನೂನುಗಳ ವಿರುದ್ಧ ಈಗ ಹೋರಾಟ ನಡೆದಿದೆ. —ಸಂಪಾದಕ





ನಿರಾಶೆಯ ಒಡಲಿನಿಂದ........ ....ಆಶೆಯ ಚಿಗುರಿಗೆ

ಪುರಾತನ ಹಂದಿಗೂಡುಗಳಂಥ ತಮ್ಮ ಗುಡಿಸಲುಗಳಿಂದ ಬಿಡಿಸಿಕೊಂಡು ಕೊಂಚ ಕೈಕಾಲು ಚಾಚಿಕೊಂಡು ಉಸಿರಾಡುವ ಸಲುವಾಗಿ ಸೈಟುಗಳಿಗಾಗಿ ಹಂಬಲಿಸಿದ ತಿಮ್ಮಸಂದ್ರದ ಬಡವರೆಲ್ಲ ಅರ್ಜಿ ಮೇಲೆ ಅರ್ಜಿ ಕೊಟ್ಟು ಬೇಡಿದ ಪ್ರಯುಕ್ತ 1976-77 ರಲ್ಲಿ ಸರ್ವೆ ನಂ, 10 2 ರಲ್ಲಿ 2 ಎಕರೆ 9 ಗುಂಟೆ ಭೂಮಿಯನ್ನು ಲ್ಯಾಂಡ್ ಅಕ್ವಿಸಿಸನ್ ಆಕ್ಟ್ ಪ್ರಕಾರ ಸರ್ಕಾರ ವಹಿಸಿಕೊಂಡು ಎಲ್ಲರ ಗಮನಕ್ಕಾಗಿ ಗೆಜೆಟ್‌ನಲ್ಲಿ ಪ್ರಕಟಿಸಿಯೂ ಆಯ್ತು. ಇದರಿಂದ ಕುಪಿತಗೊಂಡ ಭೂಮಾಲೀಕ ನಾರಾಯಣಪ್ಪ ಈ ಭೂಮಿಯನ್ನೇ ರಂಗಸ್ವಾಮಿ ಎಂಬುವನಿಗೆ ಮಾರಾಟಮಾಡಿ ಕೈತೊಳೆದುಕೊಳ್ಳಲು ನೋಡಿದ ಮಾರಾಟ ಮಾಡಿದ ನಿಜ. ಆದರೆ ಕೈ ತೊಳೆದು ಕೊಳ್ಳಲಾಗಲಿಲ್ಲ. ಏಕೆಂದರೆ ಸೈಟಿಗಾಗಿ ಅಲಾಟಾ

(ಕೊನೆಯ ಪುಟಕ್ಕೆ)

'ದಾರಿದೀಪ'ದ ಮೇಲೆ ಮುಂದುವರಿದಿರುವ ದಬ್ಬಾಳಿಕೆ

ಕೆ. ಎನ್. ಗುರುಪ್ರಸಾದ್

ಮಂಡ್ಯದ 'ದಾರಿದೀಪ' ದಿನಪತ್ರಿಕೆಯ ಸಂಪಾದಕರಾದ ದಲಿತ ಪತ್ರಕರ್ತ ಶ್ರೀ ಎಸ್. ಪುಟ್ಟರಾಮು ಮೇಲೆ ನಡೆದ ಹಲ್ಲೆ ಮತ್ತು ಹಲ್ಲೆಯ ಹಿಂದಿರುವ ದರಖಾಸ್ತು ಭೂ ಸಮಸ್ಯೆಯ ಬಗ್ಗೆ ಕಳೆದ ಸಂಚಿಕೆಯಲ್ಲಿ ಹುಲ್ಲುಕೆರೆ ಮಹದೇವ ಅವರು ವಿಸ್ತಾರವಾಗಿ ವರದಿ ಮಾಡಿದ್ದಾರೆ. ಈ ಹಲ್ಲೆಗೆ ಸಂಬಂಧಪಟ್ಟ ಅನಂತರದ ಘಟನೆಗಳ ಬಗ್ಗೆ ಇಲ್ಲಿ ಬರೆಯುತ್ತಿದ್ದೇನೆ.

ಹಲ್ಲೆಗೊಳಗಾದ ದಲಿತ ಪತ್ರಕರ್ತ ಪುಟ್ಟರಾಮು ಇತ್ತೀಚೆಗೆ ಚೇತರಿಸಿಕೊಂಡಿದ್ದರೂ ಸಹ ಅವರ ಎಡ ಕಾಲಿನ ಮಂಡಿ ಮತ್ತು ಬಲ ಭುಜ ಇನ್ನೂ ಸ್ವಾಧೀನವಿಲ್ಲದ್ದರಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಂಡ್ಯ ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟ್ ಶಂಕರ್ ಬಿದ್ರಿ ತನ್ನ ಚಾಣಾಕ್ಷ ಕುಯುಕ್ತಿ ಬುದ್ಧಿಯಿಂದಾಗಿ ಮತ್ತು ಮಂಡ್ಯದ ಶಾಸಕ ದೊಡ್ಡ ಬೋರೇಗೌಡನ ಮಧ್ಯ ಪ್ರವೇಶದಿಂದಾಗಿ ಪುಟ್ಟರಾಮು ಮೇಲೆ ಅಮಾನುಷವಾಗಿ ಹಲ್ಲೆ ನಡೆಸಿದ ಮರಕಾಡು ದೊಡ್ಡಿಯ ಯು॥ ಮೊಳ್ಳಯ್ಯ, ನಾಥೇಗೌಡ ಮತ್ತು ಸಾತನೂರಿನ ಗೂಂಡಾಗಳ ಮೇಲೆ ಕೊಲೆ ಮೊಕದ್ದಮೆ ಕೇಸು ಹಾಕುವ ಬದಲು ದೊಂಬಿ ಕೇಸನ್ನು ಹಾಕಿ ಹಲ್ಲೆಕೋರರನ್ನು ರಕ್ಷಿಸಿದ ತನ್ನ ಬುದ್ಧಿವಂತಿಕೆಗೆ ತಾನೇ ತನ್ನ ಮೀಸೆ ಮರೆಯಲ್ಲಿ ನಗುತ್ತಿದ್ದಾನೆ. ಇದರಿಂದ ಮತ್ತಷ್ಟು ಕೊಬ್ಬಿದ ಯು॥ ಮೊಳ್ಳಯ್ಯ, ನಾಥೇಗೌಡ ಮತ್ತು ಗೂಂಡಾಗಳು ಪುಟ್ಟರಾಮು ಸಂಸಾರಕ್ಕೆ ಮತ್ತೆ ಕಿರುಕುಳ ಕೊಡಲಾರಂಭಿಸಿದ್ದಾರೆ. ಹಾಡುಹಗಲೆ ಪುಟ್ಟರಾಮುವಿನ ಹೆಂಡತಿ ಮಕ್ಕಳು ಬೀದಿಯಲ್ಲಿ ತಿರುಗಾಡುವಾಗ ಅಶ್ಲೀಲ ಭಾಷೆಯಲ್ಲಿ ಅವರನ್ನು ಛೇಡಿಸುತ್ತಾ "ಆ ಹೊಲೆಯ ನನ್ ಮಗನ್ನ ಬಿಟ್ಟಿದ್ದೇ ತಪ್ಪಾಯ್ತು, ಬೆಂಕಿ ಹಚ್ಚಿ ಸುಟ್ಟಾಕಿಬಿಡಬೇಕಾಗಿತ್ತು ಎಂದು ಬೈಯ್ಯುತ್ತಾ ಕೆಂಡ ಕಾರುತ್ತಿದ್ದಾರೆ. ಪುಟ್ಟರಾಮುವಿನ ರಾಗಿ ಗದ್ದೆಯಲ್ಲಿ ಹುಲ್ಲು ಕೊಯ್ಯುವ ನೆಪದಲ್ಲಿ ರಾಗಿಯ ಪೈರನ್ನೇ ಕೊಯ್ದು ಸೇಡು ತೀರಿಸಿಕೊಳ್ಳಲು ಹೊರಟ ಇವರನ್ನು ಪುಟ್ಟರಾಮುವಿನ ಹೆಂಡತಿ ಇದರ ಬಗ್ಗೆ ಪ್ರಶ್ನಿಸಿದರೆ "ರಾಗಿ ಪೈರು ಕೊಯ್ಯುವುದೇನು ನಿಮ್ಮ ಗುಡಿಸಲನ್ನೇ ಬೆಂಕಿ ಹಚ್ಚಿ ಸುಟ್ಟು ಬೂದಿ ಮಾಡಿಬಿಡುತ್ತೇವೆ" ಎನ್ನುವಷ್ಟು ಉದ್ಧಟತನ ತೋರಿಸಿ ಗೂಂಡಾಗಿರಿ ನಡೆಸುತ್ತಿದ್ದಾರೆ ಮತ್ತು ಈಗಲೂ ಪುಟ್ಟರಾಮುವಿನ ಜಮೀನಿಗೆ ಅಕ್ರಮವಾಗಿ ಪ್ರವೇಶಿಸಿ ಅಲ್ಲಿ ಗೊಬ್ಬರ ಹಾಕಿ ತಿಪ್ಪೆಗುಂಡಿ ಮಾಡಿಕೊಂಡಿದ್ದಾರೆ. ಇಷ್ಟೆಲ್ಲಾ ಅಲ್ಲಿ ಪೋಲೀಸಿನವರ ಎದುರಿಗೇ ನಡೆದರೂ ಕೂಡ ನಾಥೇಗೌಡನ ಮನೆಯ ಕೋಳಿ ಬಾಡು ಮತ್ತು ಸರಾಯಿಯ ಅಮಲಿನಿಂದಾಗಿ ರಕ್ಷಣೆ ಕೊಡುತ್ತೇವೆಂದು ಕಾವಲು ಕಾಯುತ್ತಿರುವ ಪೋಲೀಸ್ ನಾಯಿಗಳು ಜೊಲ್ಲು ಸುರಿಸಿಕೊಂಡು ತೂಕಡಿಸುತ್ತಾ ಕುಳಿತಿವೆ.

ಹಲ್ಲೆಗೊಳಗಾದ ಪುಟ್ಟರಾಮುವನ್ನು ಪ್ರಾಣಾಪಾಯದಿಂದ ಪಾರು ಮಾಡಿದ ಶ್ರೀನಿವಾಸಪುರದ ಸವರ್ಣೀಯರಾದ ಪೋಸ್ಟ್ ಪುಟ್ಟಸ್ವಾಮಿ ಮತ್ತು ಸಹೋದರರನ್ನು ಮರಕಾಡು ದೊಡ್ಡಿಯ ಕೊಲೆಗಡುಕರು ಕೆಂಗಣ್ಣಿನಿಂದ ಕೆಕ್ಕರಿಸಿಕೊಂಡು ನೋಡತೊಡಗಿದ್ದಾರೆ. ಪುಟ್ಟರಾಮುವಿನ ಸಂಸಾರಕ್ಕೆ ಈಗಲೂ ರಕ್ಷಣೆ ಕೊಡುತ್ತಿರುವವರು ಇವರೇ ಆದ್ದರಿಂದ ಪೋಲೀಸ್‌ನವರೂ ಕೂಡ ಇವರ ಮೇಲೆ ವಕ್ರದೃಷ್ಟಿ ಬೀರಿದ್ದಾರೆ. ಆಸ್ಪತ್ರೆಯಲ್ಲಿರುವ ಪುಟ್ಟರಾಮುವಿಗೆ ಊಟ–ತಿಂಡಿ ತೆಗೆದುಕೊಂಡು ಹೋಗಿ ಕೊಟ್ಟು ಬರುತ್ತಿದ್ದ ಅವರ ಹೆಂಡತಿ ಮಕ್ಕಳನ್ನು ಸಾಯಂಕಾಲದ ವೇಳೆ ರಸ್ತೆ ಬದಿಯಲ್ಲಿ ಕಾಯುತ್ತಿದ್ದು ಜೊತೆಯಲ್ಲಿ ಕರೆದುಕೊಂಡುಹೋಗಿ ಅವರ ಮನೆಗೆ ಸುರಕ್ಷಿತವಾಗಿ ಬಿಟ್ಟು ಬರುತ್ತಿದ್ದ ಈ ಸವರ್ಣೀಯರ ಮೇಲೆ ಸೇಡು ತೀರಿಸಿಕೊಳ್ಳಲು ಹವಣಿಸಿ ಹಲ್ಲೆಕೋರರ ಎಂಜಲು ತಿಂದ ಮಹಾ ಜಾತೀವಾದಿ ರೂರಲ್ ಸಬ್ ಇನ್ಸ್‌ಪೆಕ್ಟರ್ ರಾಮಲಿಂಗು ಎಂಬ ಪೋಲೀಸ್ ಗೂಳಿ ಅಸಿಸ್ಟೆಂಟ್ ಪ್ಯಾಕ್ಟ್ರಿ ಔಟ್ ಪೋಲೀಸ್ ಸ್ಟೇಷನ್ನಿನ ಇನ್ನೊಬ್ಬ ಜಾತೀವಾದಿ ದಫೇದಾರ್ ಮಾಸ್ತಿಗೌಡನನ್ನು ಜೊತೆ ಹಾಕಿಕೊಂಡು ಶ್ರೀನಿವಾಸಪುರದ ಪೋಸ್ಟ್ ಪುಟ್ಟಸ್ವಾಮಿಯ ಮಗ ಚಂದ್ರು ಮತ್ತು ಕೊಂಗನ ನಿಂಗೇಗೌಡನ ಮಗ ಚೌಡ ಎಂಬ ಪ್ರಾಮಾಣಿಕ ಮಾನವ ಪ್ರೇಮಿ ಯುವಕರನ್ನು ಮನೆಯಿಂದ ಹೊರಗೆ ಕರೆಸಿಕೊಂಡು (ಪುಟ್ಟರಾಮು ಸಂಸಾರಕ್ಕೆ ರಕ್ಷಣೆ ಕೊಟ್ಟು ಅವರ ಮನೆ ಕಡೆ ನೋಡಿಕೊಳ್ಳುತ್ತಾ ಅವರಿಗೆ ಸಹಾಯ ಮಾಡಿದ ಕಾರಣಕ್ಕಾಗಿ) ರಸ್ತೆಯಲ್ಲಿ ರಾತ್ರಿ ಹೊತ್ತು ನಿಂತುಕೊಂಡು ಗೂಂಡಾಗಿರಿ ಮಾಡುತ್ತೀರಾ ಎಂದು ಚೆನ್ನಾಗಿ ಥಳಿಸಿದ್ದಾರೆ. ದಫೇದಾರ್ ಮಾಸ್ತಿಗೌಡ ಮೇಲ್ಕಂಡ ಯುವಕರನ್ನು ಹೊಡೆಯುವಾಗ ಪುಟ್ಟರಾಮು ನಮಗೆಲ್ಲಾ ಅವಮಾನ ಮಾಡಿದ್ದಾನೆ. ಅವನು ಆಸ್ಪತ್ರೆಯಿಂದ ಹೊರಗೆ ಬರಲಿ ವಿಚಾರಿಸಿಕೊಳ್ಳುತ್ತೇವೆ ಎಂದು ಬೊಗಳುತ್ತಿದ್ದನಂತೆ. ಇಂತಹ ಎಂಜಲು ಪೋಲೀಸರಿಗೆ ಸಾರ್ವಜನಿಕರು ನಡು ರಸ್ತೆಯಲ್ಲಿ ಜುಟ್ಟು ಹಿಡಿದು ತಾವು ಕೊಟ್ಟಿರುವ ಸೂಟು–ಬೂಟು

ದಾರಿದೀಪ ನಡೆದುಬಂದ ದಾರಿ

ದಾರಿದೀಪ ಕಳೆದ ಹದಿನೈದು ವರ್ಷದಿಂದ ಪ್ರಕಟಗೊಳ್ಳುತ್ತಿದ್ದು 1977 ರಿಂದ ದಿನಪತ್ರಿಕೆಯಾಗಿ ಹೊರಬರುತ್ತಿದೆ. ಇದರ ಸಂಪಾದಕ ಶ್ರೀ ಎಸ್. ಪುಟ್ಟರಾಮುರವರಿಗೆ "ಸಾಮಾಜಿಕ ಕಾಳಜಿ" ಎಷ್ಟು ಅಗಾಧವಾಗಿದೆ ಎಂಬುದಕ್ಕೆ ಮಂಡ್ಯದಲ್ಲಿ ಸಟ್ಟಾ ಹಾವಳಿಯ ಬಯಲು, ಕ್ಯಾಬರೆ ಹೋಟೆಲ್, ಬಾಂಬೆ ಷೋ....ಲೈಸೆನ್ಸ್ ಇಲ್ಲದ ಸರಾಯಿ ಅಂಗಡಿಗಳು ಇತ್ಯಾದಿ....ಈ ಎಲ್ಲಾ ಸಾರ್ವಜನಿಕರಿಗೆ ಮತ್ತು ಸಮಾಜಕ್ಕೆ ಹಾನಿ ಉಂಟುಮಾಡುವ ಅನಿಷ್ಟಗಳ ವಿರುದ್ಧ ಲೇಖನ ಬರೆದು ಪ್ರಕಟಿಸಿ ಪುಟ್ಟರಾಮು ಹೋರಾಟ ನಡೆಸಿದ್ದಾನೆ. ಮಂಡ್ಯದ ಮುಖವಾಣಿಯಂತಿರುವ ಇವರ ದಾರಿದೀಪ ಪತ್ರಿಕೆ ಮತ್ತು ಪುಟ್ಟರಾಮುವನ್ನು ಮಂಡ್ಯದ ಸುಸಂಸ್ಕೃತ ಜನತೆ ಎಂದಿಗೂ ಮರೆಯಲಾರರು. ಈ ಎಲ್ಲಾ ಪ್ರಕರಣಗಳಲ್ಲೂ ಶ್ರೀ ಪುಟ್ಟರಾಮುರವರು ತಮ್ಮ ಬರವಣಿಗೆಯಿಂದ ಪೋಲೀಸಿನವರಿಗೆ ಮಾರ್ಗದರ್ಶನ ನೀಡಿ ಸಹಾಯ ಮಾಡಿದ್ದಾರೆ. ದಿನಾಂಕ 29–6–79 ಮತ್ತು 30-6-78 ರಂದು ಇವರು ಬರೆದು ಪ್ರಕಟಿಸಿದ "ತಿರುಪತಿಯಲ್ಲಿ ಜೋಡಿ ಮಕ್ಕಳ ಕೊಲೆ ಪ್ರಕರಣ" ಎಂಬ ಲೇಖನ ಮಂಡ್ಯದ ಕೊಲೆಗಾರ ಆರ್. ಪ್ರಕಾಶ್ ಉ॥ ಬಸವರಾಜುವನ್ನು ಬಂಧಿಸಲು ಸಹಾಯ ಮಾಡಿತು. ಈಗ ಅಪರಾಧಿ ಪ್ರಕಾಶ್. ಉ॥ ಬಸವರಾಜು ಹೈದರಾಬಾದ್ ಜೈಲಿನಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾನೆ. ಈ ಕಾರಣಕ್ಕಾಗಿ ಆಂಧ್ರ ಪ್ರದೇಶದ ಚಿತ್ತೂರಿನ ಸೆಸೆನ್ಸ್ ಕೋರ್ಟ್‌ನ ಜಡ್ ಕರ್ನಾಟಕದಲ್ಲಿ ಇಂತಹ ಜವಾಬ್ದಾರಿಯುತವಾದ ಒಂದು ಸಣ್ಣ ಪತ್ರಿಕೆ ಇದೆಯಲ್ಲಾ. ಈ ಪತ್ರಿಕೆ ಸಹಾಯವಿಲ್ಲದಿದ್ದರೆ ನಿಜಕ್ಕೂ ಅಪರಾಧಿಯನ್ನು ಬಂಧಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಕೋರ್ಟಿನ ಒಳಗೇ ಪ್ರಶಂಸೆ ಮಾಡಿದರು. ಈ ವಿಷಯ ತಿಳಿದ ಕರ್ನಾಟಕದ ಮೈಸೂರು ರೇಂಜ್‌ನ ಡಿ. ಐ. ಜಿ. ಎಸ್. ಎನ್. ಎಸ್. ಮೂರ್ತಿಯವರು ನಮ್ಮ ದಾರಿದೀಪ ಪತ್ರಿಕೆಯ ಸಂಪಾದಕ ಪುಟ್ಟರಾಮುರವರಿಗೆ ಇಂಡಾರ್ಸ್‌ಮೆಂಟ್ ಒಂದನ್ನು ಕಳುಹಿಸಿ ಅಭಿನಂದಿಸಿದ್ದಾರೆ. ಈ ಒಂದು ಘಟನೆಯೇ ಸಾಕು ಪುಟ್ಟರಾಮು ಮತ್ತು ಪೋಲೀಸ್‌ನವರ ಸಂಬಂಧ ಹೇಗಿತ್ತೆಂಬುದನ್ನು ತಿಳಿಯಲು.

ಳನ್ನು ಬಿಚ್ಚಿಕೊಂಡು ಒದೆಯುವ ಕಾಲ ಬಹಳ ದೂರವೇನೂ ಇಲ್ಲ.

ಇತ್ತೀಚಿಗೆ ಮೈಸೂರಿನ ಪಿ ಯು ಸಿ ಎಲ್ ನ ತಂಡದವರು ಪುಟ್ಟರಾಮು ಮೇಲೆ ನಡೆದ ಹಲ್ಲೆಯ ಬಗ್ಗೆ ತನಿಖೆಗಾಗಿ ಬಂದಿದ್ದಾಗ ಪೋಲೀಸ್ ಸೂಪರಿಂಟೆಂಡೆಂಟ್ ದೊಂಬಿದಾಸಬಿದ್ರಿ "ಈ ಪ್ರಕರಣ ದಲಿತರ ಸಮಸ್ಯೆಯೂ ಅಲ್ಲ, ಪತ್ರಿಕೋದ್ಯಮದ ಸಮಸ್ಯೆಯೂ ಅಲ್ಲ. ಪುಟ್ಟರಾಮು ಒಬ್ಬ ಹವ್ಯಾಸಿ ಕುಡುಕ, ಕುಡಿದು ಅವರಿವರ ಮೇಲೆ ಗಲಾಟೆ ಮಾಡ್ತಾನೇ ಇರ್ತಾನೆ. ಜೊತೆಗೆ ತನ್ನ ಪತ್ರಿಕೆಯಲ್ಲಿ ಬೆದರಿಕೆ ವರದಿಗಳನ್ನು ಪ್ರಕಟಿಸಿ ಜನರಿಂದ ಹಣ ಕೀಳ್ತಾನೆ" ಎಂದು ಸುಳ್ಳು ಹೇಳಿಕೆ ನೀಡಿದ್ದಾನೆ ಇದೇ ಹೇಳಿಕೆಯನ್ನು ರಾಜ್ಯದ ವಾರ್ತಾ ಇಲಾಖೆಯ ಉಪನಿರ್ದೇಶಕರಾದ ಬಿ. ಎಸ್. ರೆಡ್ಡಿ ಮತ್ತು ಮಂಡ್ಯ ಜಿಲ್ಲಾ ವಾರ್ತಾಧಿಕಾರಿಯಾದ ಸಫಿಯುಲ್ಲಾರಿಗೂ ನೀಡಿದ್ದಾನೆ. ಬೆಂಗಳೂರಿನಿಂದ ತನಿಖೆ ಮಾಡ್ತೀನಿ ಅಂತ ಓಡೋಡಿ ಬಂದ ಈ ಬಿ. ಎಸ್ ರೆಡ್ಡಿ ಮಂಡ್ಯ ಜಿಲ್ಲೆಯ ತನ್ನ ಬಾಲವಾದ ಈ ಸಫಿಯನ್ನು ಕಟ್ಟಿಕೊಂಡು ಪೋಲೀಸ್ ಸೂಪರಿಂಟೆಂಡೆಂಟ್ ಮತ್ತು ಸ್ಥಳೀಯ ಕೆಲವು ಪತ್ರಿಕೆಗಳ ಸಂಪಾದಕರನ್ನು ಭೇಟಿ ಮಾಡಿ ನೆಪಮಾತ್ರಕ್ಕೆ ಲಂಕೇಶ್ ಪತ್ರಿಕೆಯ ವರದಿಗಾರರಾದ 'ಶ್ರೀ ಎಚ್. ಎಲ್. ಕೇಶವಮೂರ್ತಿಯವರನ್ನು ಭೇಟಿ ಮಾಡಿ ಪುಟ್ಟರಾಮು ಬಗ್ಗೆ ವಿಚಾರಿಸಿ ವರದಿ ತಯಾರಿಸಿ ಸರ್ಕಾರಕ್ಕೆ ರವಾನಿಸುತ್ತಾನೆ. ಸೋಜಿಗವೆಂದರೆ ಲಂಕೇಶ್ ಪತ್ರಿಕೆಯ ವರದಿಗಾರ ಶ್ರೀ ಕೇಶವಮೂರ್ತಿಯವರ ಹೇಳಿಕೆ ಮಾತ್ರ ಪುಟ್ಟರಾಮು ಪರವಾಗಿದ್ದು ಮಿಕ್ಕೆಲ್ಲರ ಹೇಳಿಕೆ ವಿರುದ್ಧವಾಗಿದೆ (ಮೇ 8, 1983 ರ ಲಂಕೇಶ್ ಪತ್ರಿಕೆ ನೋಡಿ).

ಈ ಹಿಂದೆ ದಿನಾಂಕ : 7-7-1981 ರಂದು ರಾಜ್ಯದ ವಾರ್ತಾ ನಿರ್ದೇಶಕರಾಗಿದ್ದ ವಿಜಯ ಬಿ. ಸಾಸನೂರ್‌ರವರಿಗೆ ಮಂಡ್ಯ ಜಿಲ್ಲೆಯ ವಾರ್ತಾಧಿಕಾರಿಯಾದ ಸಫಿಯ ಹಲಾಲುಕೋರತನದ ಮತ್ತು ಆತನ ನಿಷ್ಕ್ರಿಯತೆಯ ಬಗ್ಗೆ ಒಂದು ಬಹಿರಂಗ ಪತ್ರ ಬರೆದು ಪುಟ್ಟರಾಮು ತಮ್ಮ ದಾರಿದೀಪ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಈ ಪ್ರಕರಣದಿಂದ ಕಣ್ಣು ಕೆಂಪಗೆ ಮಾಡಿಕೊಂಡು ತನ್ನ ಮೈಯೆಲ್ಲಾ ಪರಚಿಕೊಳ್ಳುತ್ತಾ ತಕ್ಕ ಸಮಯಕ್ಕಾಗಿ ಕಾಯುತ್ತಿದ್ದ ಈ ಸಫಿ ಎಂಬ ಕಪಿಗೆ ಪುಟ್ಟರಾಮು ಮೇಲೆ ಹಲ್ಲೆ ನಡೆದಾಗ ಹೆಂಡ ಕುಡಿದಂತಾಯ್ತು. ಸರಿ ಬೆಂಗಳೂರಿನಿಂದ ಬಂದಿದ್ದ ತನ್ನ ಗುರು ಬಿ. ಎಸ್. ರೆಡ್ಡಿಗೆ ಪುಟ್ಟರಾಮು ವಿರುದ್ಧ ವರದಿ ಮಾಡಲು ಪುಸಲಾಯಿಸಿದ.

ಇನ್ನು ಈ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ಶಂಕರ್‌ಬಿದ್ರಿ ದಲಿತಪತ್ರಕರ್ತ ಪುಟ್ಟರಾಮು ವಿರುದ್ಧ ಹೇಳಿಕೆ ನೀಡಲು ಕಾರಣಗಳಿವೆ. ಮೊದಲನೆಯದಾಗಿ ಈತ ಮೊದಲಿನಿಂದಲೂ ಜಾತೀವಾದಿಯಾಗಿ ದಲಿತ ವಿರೋಧಿಯಾಗಿದ್ದು, ಮಂಡ್ಯಕ್ಕೆ ಬಂದು ಅಧಿಕಾರ ವಹಿಸಿಕೊಂಡ ನಂತರ ಎಳೆ ನಿಂಬೆ ಕಾಯಿಯಂತೆ ಕೆಲವು ಆತುರದ ನಿರ್ಧಾರ ತೆಗೆದುಕೊಂಡ ಬಗ್ಗೆ ದಿನಾಂಕ 23-2-83 ರ ದಾರಿದೀಪ ಪತ್ರಿಕೆಯಲ್ಲಿ "ಸಾಕು ಸಾಕಪ್ಪಾ... ಶಂಕರ್‌ಬಿದ್ರಿ ಕಾಟ !" ಎಂಬ ತಲೆಬರಹದಡಿಯಲ್ಲಿ ಪುಟ್ಟರಾಮು ಬರೆದು ಪ್ರಕಟಿಸಿದ್ದರು. ಈ ಲೇಖನದಿಂದ ಬಿದ್ರಿಯ ಮೈಯೆಲ್ಲಾ ಉರಿಯತೊಡಗಿತ್ತು. ಪುಟ್ಟರಾಮು ಮೇಲೆ ಹಲ್ಲೆ ನಡೆಸಿದ ಹಲ್ಲೆಕೋರರಿಗೆ ಬರಿ ದೊಂಬಿ ಕೇಸು ಹಾಕಿ ಹಲ್ಲೆಕೋರ ಕೊಲೆಗಡುಕರನ್ನು ಬಚಾವು ಮಾಡಿದ್ದಲ್ಲದೆ, ಪುಟ್ಟರಾಮು ವಿರುದ್ಧ ಅವನೊಬ್ಬ ಹವ್ಯಾಸಿ ಕುಡುಕನೆಂದೂ ಬೆದರಿಕೆ ವರದಿ ಪ್ರಕಟಿಸಿ ಹಣ ಮಾಡುವವನೆಂದೂ ಸುಳ್ಳು ಹೇಳಿಕೆ ನೀಡಿ ಉರಿಯುತ್ತಿದ್ದ ತನ್ನ ಮೈಯನ್ನು ತಣ್ಣಗೆ ಮಾಡಿಕೊಂಡಿರುವುದರಲ್ಲಿ ಆಶ್ಚರ್ಯಪಡಬೇಕಾದ್ದೇನೂ ಇಲ್ಲ.

ಸಂಘರ್ಷ ಸಮಿತಿ ಕಾರ್ಯಕ್ರಮ

ಈ ನಡುವೆ ಪುಟ್ಟರಾಮು ಮೇಲೆ ಹಲ್ಲೆ ನಡೆಯಲು ಕಾರಣವಾದ ಚೆನ್ನಪ್ಪನ ದೊಡ್ಡಿ ಹರಿಜನರ ದರಖಾಸ್ತು ಭೂಮಿ ಸಮಸ್ಯೆಯನ್ನು ಪರಿಹರಿಸಿ ದಲಿತರಿಗೆ ದಕ್ಕುವಂತೆ ಮಾಡಲು ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಂಡ್ಯ ಶಾಖೆಯು ರಾಜ್ಯ ಮಟ್ಟದ ಕಾರ್ಯಕ್ರಮವೊಂದನ್ನು ರೂಪಿಸತೊಡಗಿದೆ.

ಜಾತೀವಾದಿ ಮಂಡ್ಯ ರೂರಲ್ ಸಬ್‌ಇನ್‌ಸ್ಪೆಕ್ಟರ್ ರಾಮಲಿಂಗುವರ್ಗಾವಣೆ :

ವರ್ಗಾವರ್ಗಿ ನಾಟಕ !

ಈ ವರದಿ ಪ್ರಕಟಿಸುತ್ತಿದ್ದಂತೆ ಒಂದು ಒಳ್ಳೆ ಸುದ್ದಿ ಬಂದಿದೆ. ಪುಟ್ಟರಾಮು ಮೇಲೆ ಹಲ್ಲೆ ನಡೆಸಿದ ಹಲ್ಲೆಕೋರರಿಗೆ ಪರೋಕ್ಷವಾಗಿ ಕುಮ್ಮಕ್ಕು ಕೊಟ್ಟಿದ್ದ ಮಂಡ್ಯದ ರೂರಲ್ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಮಹಾಜಾತಿವಾದಿ ರಾಮಲಿಂಗುವನ್ನು ಮೈಸೂರಿನ ಕೆ. ಆರ್. ಎಸ್. ಗೆ ವರ್ಗಾ ಮಾಡಲಾಗಿದೆ. ಈತನ ನಡವಳಿಕೆಯನ್ನು ವಿರೋಧಿಸಿದ್ದ ಮಂಡ್ಯದ ದಲಿತ ಸಂಘರ್ಷ ಸಮಿತಿ ಈತನನ್ನು ಕೂಡಲೆ ವರ್ಗ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿತ್ತು.

ಆದರೆ ಹಲ್ಲೆಕೋರರ ಮೇಲೆ ತೀವ್ರ ಕ್ರಮ ಕೈಗೊಳ್ಳದೆ ಕೇವಲ ಈ ವರ್ಗಾರ್ವರ್ಗಿ ನಾಟಕದಿಂದ ದಾರಿದೀಪ ಪ್ರಕರಣಕ್ಕೆ ತೆರೆ ಎಳೆಯಲು ಸರ್ಕಾರ ಹವಣಿಸಿದರೆ ಎಚ್ಚೆತ್ತ ದಲಿತರಿಂದ ತೀವ್ರ ಪ್ರತಿಕ್ರಿಯೆಯನ್ನು ಎದುರಿಸಬೇಕಾಗುತ್ತದೆ.

ಪೋಲೀಸ್ ಶಂಕರ್ ಬಿದ್ರಿಗೆ ಪುಟ್ಟರಾಮು ಸವಾಲು !!

ಈ ಎಲ್ಲಾ ಘಟನೆ ವರದಿಗಳ ಬಗ್ಗೆ ಆಸ್ಪತ್ರೆಯಲ್ಲಿರುವ ಪುಟ್ಟರಾಮುರವರನ್ನು ವಿಚಾರಿಸಿದಾಗ ಅವರು ಹೇಳಿದ್ದಿಷ್ಟು. ನಾನು 15 ವರ್ಷದಿಂದ ದಾರಿದೀಪ ಪತ್ರಿಕೆ ನಡೆಸುತ್ತಿದ್ದೇನೆ. ನನ್ನ ಎಲ್ಲಾ ಲೇಖನಗಳೂ ಸಮಾಜದ ಓರೆಕೋರೆಗಳನ್ನು ತಿದ್ದಲು ಬೆಳಕು ಚೆಲ್ಲುತ್ತದೆ. ಇದುವರೆವಿಗೂ ನಾನು ಪ್ರಾಮಾಣಿಕವಾಗಿಯೇ ಕೆಲಸ ಮಾಡಿದ್ದೇನೆ. ಕುಡಿಯುವುದು ಪ್ರತಿಯೊಬ್ಬ ಮನುಷ್ಯನ ಸ್ವಂತದ ವಿಷಯ. ಕುಡಿದು ಬೇರೆಯವರ ಜೊತೆ ಜಗಳ ಮಾಡಿದಾಗ ಮಾತ್ರ ಪೋಲೀಸ್‌ನವರು ಕೇಳಬೇಕು. ಇದುವರೆವಿಗೂ ನನ್ನ ಮೇಲೆ ಅಂತಹ ಯಾವ ಕೇಸುಗಳೂ ಇಲ್ಲ. ಒಂದು ಪಕ್ಷ ನಾನು ನನ್ನ ಪತ್ರಿಕೆಯಲ್ಲಿ ಬೆದರಿಕೆ ವರದಿಗಳನ್ನು ಪ್ರಕಟಿಸಿ ಜನರಿಂದ ಹಣ ಕೀಳುತ್ತಿರುವುದನ್ನು ಸಾಭೀತುಪಡಿಸಿದರೆ ಅಥವಾ ಸುಳ್ಳು ಸುದ್ದಿ ಪ್ರಕಟಿಸಿ ಮಂಡ್ಯದ ಜನತೆಯನ್ನು ತಪ್ಪು ಹಾದಿಗೆ ತಳ್ಳುವ ಪ್ರಯತ್ನ ಮಾಡಿದ್ದರೆ ಅಥವಾ ನನ್ನ ಇದುವರೆಗಿನ ಪತ್ರಿಕೆಗಳಲ್ಲಿ ಎಲ್ಲಿಯಾದರೂ "ಬ್ಲಾಕ್ ಮೈಲ್" ಮಾಡುವಂತಹ ಲೇಖನಗಳು ಪ್ರಕಟವಾಗಿದ್ದರೆ ಪೋಲೀಸ್ ಸೂಪರಿಂಟೆಂಡೆಂಟ್ ಮಾನ್ಯ ಶ್ರೀ ಶಂಕರ್ ಬಿದ್ರಿಯವರು ಅದನ್ನು ರುಜುವಾತುಪಡಿಸಲಿ. ನಾನು ಸಾರ್ವಜನಿಕ ವಿಚಾರಣೆಗೂ ಸಿದ್ಧನಿದ್ದೇನೆ. ಒಂದು ವೇಳೆ ಅವರು ಮಾಡಿರುವ ಆಪಾದನೆ ನಿಜವಾದುದ್ದೆಂದು ರುಜುವಾತು ಪಡಿಸಿದಲ್ಲಿ ಆಗ ನಾನು ತಲೆ ಬೋಳಿಸಿಕೊಂಡು ಕತ್ತೆಯ ಮೇಲೆ ಕುಳಿತು ಮೆರವಣಿಗೆ ಮಾಡಿಸಿಕೊಳ್ಳುವುದಲ್ಲದೆ ಪತ್ರಿಕೋದ್ಯಮದಿಂದಲೇ ದೂರ ಸರಿಯುತ್ತೇನೆ. ಶಂಕರ್‌ಬಿದ್ರಿ ಕೈಯಲ್ಲಿ ಅವರೇ ಮಾಡಿರುವ ಆಪಾದನೆಗಳನ್ನು ರುಜುವಾತು ಪಡಿಸಲಾಗದಿದ್ದಲ್ಲಿ ಅವರು ತಮ್ಮ ಪೋಲೀಸ್ ಕೆಲಸಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗಲಿ, ಎಂದು ಹೇಳಿದರು. ಇದೇ ಸವಾಲನ್ನು ಅವರು ಬಹಿರಂಗವಾಗಿ ಪತ್ರಿಕಾ ಹೇಳಿಕೆ ನೀಡಿ ತಿಳಿಸಿದ್ದಾರೆ. ಮಾನ್ಯ ಶ್ರೀ ಶಂಕರ್ ಬಿದ್ರಿಯವರು ಗೌರವಸ್ಥ ಮನೆತನದಿಂದ ಬಂದಿರುವುದು ನಿಜವಾಗಿದ್ದರೆ, ಅವರಿಗೆ ತಾಕತ್ತಿದ್ದರೆ ದಾರಿದೀಪ ಪತ್ರಿಕೆಯ ಸಂಪಾದಕರಾದ ಶ್ರೀ ಎಸ್. ಪುಟ್ಟರಾಮುರವರ ಸವಾಲ್‌ಗೆ ಉತ್ತರ ಕೊಡಲಿ.

ಸವರ್ಣೀಯರ ಹೋಟೆಲುನುಗ್ಗಿ ಅಸ್ಪೃಶ್ಯತೆಯ ಕೊಂದಕಥೆ

ಸುಮಾರು 25 ಹುಡುಗರು ಸವರ್ಣೀಯರ ಕೇರಿಯ ಕಡೆ ಹೊರಟು ನಿಂತಾಗ ನಮ್ಮ ಜನರೆಲ್ಲಾ ನಿಂತು ನಮ್ಮನ್ನೇ ನೋಡುತ್ತಿದ್ದರು. ನಾವೆಲ್ಲ ಹಲ್ಲೆಕೆರೆ ಹೋಟ್ಲಿಗೆಹೋದಾಗ ಆ ಹೋಟ್ಲಿನಯಜಮಾನನಿಗೆ ನಾವೆಲ್ಲ ಹೊಲೇರು ಅಂತ ಗೊತ್ತಾದಾಗ ಏನು ಮಾಡೊದಂತ ಯೋಚಿಸುವವನ ಹಾಗೆ ನಮ್ಮನ್ನೇ ನೋಡ್ತಾ ಹಾಗೇ ಕುಳಿತಿದ್ದ. ಆಜಾನುಬಾಹು ಮತ್ತು ದಪ್ಪಮೀಸೆ ಬಿಟ್ಟಿದ್ದ ನನ್ನ ಸ್ನೇಹಿತ ಶಿವಣ್ಣ "ರೀ ಬನ್ರಿ ಇಲ್ಲಿ ನಮ್ಮ ಹುಡುಗರಿಗೆಲ್ಲ ಕಾಫಿ ತಂದು ಕೊಡಿ" ಎಂದು ಜಬರ್‌ದಸ್ತಾಗೇ ಕೇಳಿದಾಗ ಒಳಗೋದವನು ಬಹಳ ಹೊತ್ತಿನ ನಂತರ ನಮಗೆಲ್ಲ ಕಾಫಿ ತಂದು ಕೊಟ್ಟೆ ಬಿಟ್ಟಾ !

ಕೆ. ಎನ್. ಗುರುಪ್ರಸಾದ್

ಸುಮಾರು ೮ ವರ್ಷದ ಹಿಂದಿನ ಘಟನೆ. ನಮ್ಮ ಸ್ವಂತ ಊರಾದ ಕೆರಗೋಡಿನಲ್ಲಿ (ಮಂಡ್ಯ ತಾಲ್ಲೂಕು) ಮೂರು ಹೋಟೆಲ್‌ಗಳಿದ್ದವು. ಸವರ್ಣೀಯರು ನಡೆಸುತ್ತಿದ್ದ ಈ ಹೋಟೆಲ್‌ಗಳಿಗೆ ಹೊಲೆಮಾದಿಗರಿಗೆ ಪ್ರವೇಶವಿರಲಿಲ್ಲ. ಸುಮಾರು 150 ಕುಳ ಹೊಲೆಮಾದಿಗರಿದ್ದು ಹೊಟೆಲ್‌ನ ಹೊರಗಡೆ ಬುಟ್ಟಿಯಲ್ಲಿಟ್ಟಿರುವ ಗಾಜಿನ ಲೋಟ ತೊಳೆದುಕೊಂಡೇ ಕಾಫಿ ಕುಡಿಯಬೇಕಾದ ಪರಿಸ್ಥಿತಿ ಇತ್ತು. ಈ ಕಾರಣಕ್ಕಾಗಿಯೇ ಕೆಲವು ವಿದ್ಯಾವಂತರು ಊರಿನಲ್ಲಿದ್ದಾಗ ಹೋಟೆಲ್‌ನಲ್ಲಿ ಕಾಫಿ ಕುಡಿಯುವ ಅಭ್ಯಾಸವನ್ನೇ ಬಿಟ್ಟುಬಿಟ್ಟಿದ್ದರು. ಆಗ ನಾನಿದ್ದುದ್ದು ಮಂಡ್ಯದಲ್ಲಿ. ಎದ್ದು-ಬಿದ್ದು ಹೇಗೋ 5 ನೇ ತರಗತಿಯವರೆಗೆ ಓದಿದ್ದ ನಮ್ಮಪ್ಪ ಕಷ್ಟಪಟ್ಟು ಮಂಡ್ಯದ ಸಕ್ಕರೆ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದರಿಂದ, ಕಂಪನಿಯವರು ಕೊಟ್ಟದ್ದ ಕ್ವಾಟ್ರಸ್‌ನಲ್ಲೇ ನಮ್ಮ ಸಂಸಾರವಿತ್ತು. ನಾನು ಹೈಸ್ಕೂಲ್‌ನಲ್ಲಿ ಓದುತ್ತಿದ್ದ ಸಮಯದಲ್ಲಿ ಸ್ವಲ್ಪ ಮಟ್ಟಿಗೆ ಪುಂಡಾಟಿಕೆ ಮಾಡುತ್ತಿದ್ದರ ಪರಿಣಾಮವಾಗಿ ಎಸ್. ಎಸ್. ಎಲ್. ಸಿ. ಯಲ್ಲಿ ಫೇಲ್ ಆಗಿ ಒಂದು ವರ್ಷ ಮನೆಯಲ್ಲಿ ಕುಳಿತಿದ್ದೆ. ನಮ್ಮ ಊರಿನಲ್ಲಿದ್ದ ಕ್ರಾಂತಿಕಾರಕ ಮನೋಭಾವನೆಯುಳ್ಳ ಕೆಲವು ನನ್ನ ಸ್ನೇಹಿತರಾದ ಗುರುಸ್ವಾಮಿ, ಶಿವಾನಂದ, ಶಿವಣ್ಣ ಇವರುಗಳು ನನ್ನನ್ನು ಭೇಟಿಮಾಡಿ "ನಮ್ಮೂರ್ನಾಗಿರೋ ಹೊಟ್ಲಿಗೆ ನುಗ್ಗಬೇಕು, ನಾವೆಲ್ಲಾ ಹಿಂಗಂತ ತೀರ್ಮಾನ ಮಾಡಿವಿ ಬಾ. ಎಂದು ಕರೆದಾಗ ನನಗಂತೂ ಸಂತೋಷ-ಆವೇಶ ಒಟ್ಟಿಗೇ ಉಂಟಾಗಿ "ಆಯ್ತು ಮನೆಗೆ ಹೇಳಿ ಬಂದು ಬಿಡ್ತಿನಿ. ಅಂತ ಹೇಳಿ ಮನೆಗೆ ಬಂದೆ. ನಮ್ಮಪ್ಪ ದೈವಭಕ್ತರು. ಜೊತೆಗೆ ಹರಿಕಥೆ ದಾಸರು ಬೇರೆ ಯಾರ ತಂಟೆ ಸಹವಾಸನೂ ಬೇಡಾಂತ ತಾನಾಯ್ತು ತನ್ನ ಸಂಸಾರ ಆಯ್ತು ಅಂತೇಳಿ ವಿರಾಮದ ವೇಳೇಲಿ ದೇವರ ನಾಮ ಹಾಡುವುದು, ದೇವರ ಪುಸ್ತಕ ಓದುವುದನ್ನು ಮಾಡುವ ನಮ್ಮಪ್ಪನನ್ನು ನೋಡಿದಾಗಲೇ ನನ್ನ ಉತ್ಸಾಹವೆಲ್ಲಾ ಕರಗಿಹೋಯ್ತು. ಪಾಪ-ಪುಣ್ಯ. ದೇವ್ರು – ದಿಂಡ್ರು ಅನ್ನೋ ನಮ್ಮಪ್ಪ ನಾನು ನಮ್ಮೂರ್ನಾಗಿರೋ ಗೌಡ್ರ ಹೋಟ್ಲಿಗೆ ನುಗ್ತೀನಂದ್ರೆ ನನ್ನ ಕಳಿಸಿಕೊಡ್ತಾನ ಅಂತ ಭಯ ಆಯ್ತು. ಹೇಳೋದೆ ಬೇಡ ಸುಮ್ಮನೆ ಹೋಗಿಬಿಡೋಣ ಅನ್ನಿದ್ರೂ ಯಾಕೋ ಧೈರ್ಯನೇ ಬರಲಿಲ್ಲ. ಯಾಕೆಂದರೆ ಆಗ ನಾನು ಎಲ್ಲಿಗೆ ಹೋಗಬೇಕಾದ್ರೂ ಮನೆಯಲ್ಲಿ ನಮ್ಮಪ್ಪ–ನಮ್ಮವ್ವನಿಗೆ ಹೇಳಿಯೆ ಹೊರಗೆ ಹೋಗುತ್ತಿದ್ದೆ. ಕೇಳಿಯೇಬಿಡೋಣ ಅವರು ಒಪ್ಲಿ ಬಿಡ್ಲಿ, ಹೋಗೋದಂತೂ ಗ್ಯಾರಂಟಿ ಅಂತ ಗಟ್ಟಿ ಮನಸ್ಸು ಮಾಡಿಕೊಂಡು "ನಾನು ಕೆರಗೋಡಿಗೆ ಹೋಗ್ತೀನಿ. ನಾಳೆ ನಮ್ಮ ಹುಡ್ಗರೆಲ್ಲಾ ಹೋಟ್ಲು, ದೇವಸ್ಥಾನಕ್ಕೆ ನುಗ್ತಾರಂತೆ", ಅಂದೆ. ಪುರಂದರದಾಸರ ಕೀರ್ತನೆ ಓದುತ್ತಾ ಕುಳಿತಿದ್ದ ನಮ್ಮಪ್ಪ ನನ್ನನ್ನೇ ಎವೆಯಿಕ್ಕದೆ ನೋಡ್ತಾ ಇದ್ದ. ಪಕ್ಕದಲ್ಲಿದ್ದ ನಮ್ಮವ್ವ ಗಾಬರಿಯಿಂದ "ನಿನಗ್ಯಾಕ್ಲ ಆ ಉಸಾಬರಿ ಯಾರೇನಾದ್ರೂ ಮಾಡಿಕೊಳ್ಲಿ, ನೀ ಸುಮ್ಕೆ ಮನೆಲಿರು," ಅಂದ್ಲು. ನಮ್ಮಪ್ಪ ಒಂದು ಕ್ಷಣ ಯೋಚಿಸಿ ನಮ್ಮವ್ವನ ಕಡೆ ತಿರುಗಿ "ಲೇ ನೀ ಸುಮ್‌ಕುತ್ಕಳಮ್ಮಿ", ಅಂತ ಗದರಿಸಿ ಅಂತ ಗದರಿಸಿ "ನೋಡ್ಲಾ ಮಗಾ ನಿಂಗೆ ನಮ್ಮೂರ್ನೋಗಿ ಹೋಟ್ಲಿಗೆ ನುಗ್ಗೊ ಆಶೆ, ಧೈರ್ಯ ಇದ್ದರೆ ಹೋಗು, ಅಕಸ್ಮಾತ್ ಅಲ್ಲೇನಾದ್ರೂ ಗೌಡ್ರುಗೂ ನಿಮ್ಗೂ ಜಗಳ ಆಗಿ ನೀನು ಸತ್ರೋದ್ರೂ ನಾನು ಅಳೋದಿಲ್ಲ. ನನಗೆ ಬಾಳಾ ಸಂತೋಷನೇ ಆಗ್ತದೆ, ನನ್ ಮಗ ನಮ್ ಜನಕ್ಕೋಸ್ಕರ ಸತ್ತ ಅಂತ ಎದೆ ತಟ್ಟಿ ಹೇಳಿಕೊಳ್ತಿನಿ". ಅಂದಾಗ ನನಗಂತೂ ಸಂತೋಷದಿಂದ ಕುಣಿಯುವಂಗಾಯ್ತು. ಮನೆಯಿಂದ ಹೊರಬಿದ್ದವನೆ ಬಂದು ನನ್ನ ಸ್ನೇಹಿತರನ್ನು ಕೂಡಿಕೊಂಡು ಬಸ್‌ಸ್ಟ್ಯಾಂಡ್ ದಾರಿ ಹಿಡಿದೆ. ದಾರಿಯಲ್ಲಿ ಸಿಕ್ಕಿದ ಸೈಕಲ್‌ಷಾಪ್ ಒಂದರಲ್ಲಿ ಯಾವುದಕ್ಕೂ ಇರಲಿ ಅಂತ ಎಲ್ಲಾರತ್ರೂ ಒಂದೊಂದು ರೂಪಾಯಿ ಇಸ್ಕಂಡು ನಾಲ್ಕು ಹಳೆಯ ಸೈಕಲ್ ಚೈನ್ಸ್ ತೆಗೆದುಕೊಂಡು ಬ್ಯಾಗಿಗೆ ತುರುಕಿಕೊಂಡು ಬಂದವರೇ ಕೆರಗೋಡಿಗೆ ಹೋಗುವ ಬಸ್ಸಿನಲ್ಲಿ ಕುಳಿತುಕೊಂಡೊ. ಬಸ್ ಹೊರಡೋದು ಇನ್ನೂ ಅರ್ಧ ಗಂಟೆ ಆಯ್ತದೆ ಅಂತ ಕಂಡಕ್ಟರ್ ಹೇಳಿ ಡ್ರೈವರ್ ಜೊತೆ ಬೀಡಿ ಸೇದುತ್ತಾ ಕಡ್ಲೆಕಾಯಿ ಮಾರುತ್ತಿದ್ದ ಹೆಂಗಸಿನ ಜೊತೆ ಹಲ್ಲು ಗಿಂಜುತ್ತಾ ಮಾತಾಡ್ತಾ ನಿಂತಾಗ, ನಮಗೆಲ್ಲರಿಗೂ ಅಸಾಧ್ಯ ಕೋಪ ಬಂದು ಮೈಯೆಲ್ಲಾ ಉರಿಯತೊಡಗಿತ್ತು. ಅಂತು ಕೊನೆಗೂ ಬಸ್ ಹೊರಡುವ ಸೂಚನೆ ಬಂದಾಗ ನಾನು ನಮ್ಮೂರ ಹೋಟ್ಲಲ್ಲಿ ಕಾಫಿ ಕುಡಿಯುವ ಕನಸು ಕಾಣತೊಡಗಿದೆ. ಮಧ್ಯದಲ್ಲೇ ಎಚ್ಚರಿಸಿದ ನನ್ನ ಸ್ನೇಹಿತ ಗುರುಸ್ವಾಮಿ ನಾಳೆ ಎಷ್ಟೊತ್ತಿಗೆ ಯಾರ್ಯಾರು ಯಾವ ರೀತಿ ಹೋಟ್ಲಿಗೆ ನುಗ್ಗೋದು ಅನ್ನೂದರ ಬಗ್ಗೆ ಚರ್ಚಿಸತೊಡಗಿದ. "ಯಾರ್ರೀ ಕೆರಗೋಡ್ ಎಂದು ಬಸ್ಸಿನ ಕ್ಲೀನರ್ ಕಿರುಚಿದಾಗಲೇ ನಾವು ನಮ್ಮೂರು ತಲುಪಿದ್ದೇವೆಂದು ನಮಗೆ ಗೊತ್ತಾದುದ್ದು. ದಡದಡನೆ ಬಸ್ಸಿನಿಂದಿಳಿದು ಬಿರಬಿರನೆ ನಮ್ಮ ಕೇರಿಯ ಕಡೆ ಹೆಜ್ಜೆ ಹಾಕತೊಡಗಿದೆವು

ನಮ್ಮ ಕೇರಿ ತಲುಪಿದೊಡನೆ ನಮಗಾಗಿಯೇ ಕಾಯುತ್ತಿದ್ದ ಏಳೆಂಟು ಜನ ಯುವಕರು ಬಂದು ನಮ್ಮೊಡನೆ ಸೇರಿಕೊಂಡರು. ನಮ್ಮ ಕೇರಿಯಲ್ಲೆಲ್ಲ ಏನೋ ಒಂದು ರೀತಿಯ ಹೊಸ ಬಗೆಯ ವಾತಾವರಣ ಮೂಡಿತ್ತು. ಯುವಕರೆಲ್ಲಾ ಉತ್ಸಾಹದಿಂದ ಓಡಾಡುತ್ತಿದ್ದರೆ, ಕೇರಿಯ ಹಿರಿಯರೆಲ್ಲಾ ಒಂದು ರೀತಿಯ ಭಯದಿಂದ ಅಲ್ಲಲ್ಲಿ ಗುಂಪು ಕಟ್ಟಿಕೊಂಡು ಏನೋ ಹೊಲಗೇರಿಗೆ ಕೇಡು ಬಂದ[illegible] ಮಾತನಾಡಿಕೊಳ್ಳುತ್ತಿದ್ದರು. ನಮ್ಮ ಕೇರಿಯವ[illegible]ಗೆಲ್ಲಾ ಈಗಾಗಲೇ ನಾವು ಹೋಟ್ಲಿಗೆ ನುಗ್ಗೋ ವಿಷಯ ಗೊತ್ತಾಗಿಬಿಟ್ಟಿತ್ತು. ರಾತ್ರಿಯ ಕತ್ತಲು ಕವಿಯುತ್ತಿದ್ದಂತೆ ನಮ್ಮ ಕೇರಿಯ ಓದುವ ಹುಡುಗರು ಮತ್ತು ಯುವಕರು ಸುಮಾರು 25 ಮಂದಿ ಒಂದು ಕಡೆ ಸೇರಿ ಕೆ. ಎಂ. ಪಂಚಲಿಂಗಯ್ಯನವರ ಮುಂದಾಳುತನದಲ್ಲಿ ನಾವೆಲ್ಲಾ ಬೆಳಿಗ್ಗೆ 9 ಗಂಟೆಗೆ ಸರಿಯಾಗಿ ಊರಿನ ಮೂರು ಹೋಟೆಲ್‌ಗಳಿಗೂ

ದ ಎಪ್ಪತ್ತು-ಎಪ್ಪತ್ತೈದು ವರ್ಷಗಳಿಂದ ಭಾರತೀಯ ಸಮಾಜ ಜೀವನದಲ್ಲಿ ಕಾರ್ಯನಿರತವಾಗಿರುವ ವಿವಿಧ ಸಾಮಾಜಿಕ, ರಾಜಕೀಯ ಸಂಘಟನೆಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವರೂಪವು ಬೇರೆಯೇ ಆಗಿದೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ಥಾಪನೆಯ ಕಾಲದಿಂದಲೇ ಅದರ ಅನುಯಾಯಿಗಳಲ್ಲಿ ತಮ್ಮ ಸಂಘಟನೆಯು ಅನ್ಯರಿಗಿಂತ ಹೆಚ್ಚು ರಾಷ್ಟ್ರವಾದಿಯಾಗಿದೆ ಎಂಬ ದರ್ಪವಿದೆ. ಅವರ ಪ್ರತಿಯೊಂದು ಕಾರ್ಯಕಲಾಪಗಳಲ್ಲಿ ಈ ದರ್ಪ ಭಾವನೆಯು ಕಂಡುಬರುತ್ತದೆ. ವಿಶೇಷವಾಗಿ ವಾಮಪಂಥಿ ಚಳವಳಿಗಳನ್ನು ಜಡವಾದಿ, ಭೌತಿಕವಾದಿ, ಅರಾಷ್ಟ್ರೀಯ ಇತ್ಯಾದಿ ವಿಶೇಷಣಗಳಿಂದ ಅಲಂಕರಿಸಿ ಸಂಘದ ರಾಷ್ಟ್ರೀಯತೆಯನ್ನು ಚೊಕ್ಕ ಚಿನ್ನವೆಂದು ಹೇಳುವ ಅವರ ರೀತಿಯಲ್ಲಿಯೇ ಈ ಮಾತು ಎದ್ದು ಕಾಣುತ್ತದೆ. ಸಂಘದ ದೃಷ್ಟಿಯಲ್ಲಿ ಹಿಂದುತ್ವವು ರಾಷ್ಟ್ರೀಯತ್ವದ ಪರ್ಯಾಯವಾಗಿದ್ದು ಭಾರತದ ಪ್ರತ್ಯೇಕ ಧೂಳಿ ಕಣದಲ್ಲಿ ದೇವತ್ವವು ತುಂಬಿದೆ. "ನಮಗೆ ಈ ಭೂಮಿಗಿಂತ ಪವಿತ್ರವಾದದ್ದು ಇನ್ನೇನೂ ಇಲ್ಲ. ಈ ಭೂಮಿಯ ಮೇಲಿರುವ ಪ್ರತಿಯೊಂದು ಧೂಳಿಕಣ, ಸಚೇತನ ಅಚೇತನ ವಸ್ತು, ಕಟ್ಟಿಗೆ ಕಲ್ಲು, ವೃಕ್ಷ ಮತ್ತು ನದಿ ಪವಿತ್ರವಾಗಿದೆ," ಎಂದು ಹೇಳುವ ಗೋಳವಲಕರರಿಗೆ ಭಾರತೀಯ ಮನುಷ್ಯನು ಹೇಗೆ ಕಾಣುತ್ತಾನೆ? "ವಿಚಾರ ಧನ" ವನ್ನು ಓದುವಾಗ ಅಥವಾ ರಾಷ್ಟ್ರವಾದದ ಬಗ್ಗೆ ಚಿಂತನೆಯನ್ನು ಮಾಡುವಾಗ ಪರ್ವತ, ನದಿ, ಶಿಖರ, ವೃಕ್ಷ, ಸಮುದ್ರ ಇವೆಲ್ಲವುಗಳ ವಿಶ್ಲೇಷಣೆಯಂತೂ ಆಗುತ್ತದೆ. ಆದರೆ ಮನುಷ್ಯನ ಪಾಡೇನು? ಹಿಂದೂ ರಾಷ್ಟ್ರವಾದದ ಆಧಾರವಾದ ಮಾನವ ಸಮೂಹದ ಐಕ್ಯದ ಪಾಡೇನು? ಹಿಂದೂ ರಾಷ್ಟ್ರವಾದದ ದೃಷ್ಟಿಯಲ್ಲಿ ಯಾರಿಗಾಗಿ ರಾಷ್ಟ್ರದ ಅಗತ್ಯವಿದೆಯೋ, ಯಾರ ಜೀವನ ಸಮೃದ್ಧಿಗಾಗಿ ರಾಷ್ಟ್ರವು ಅಸ್ತಿತ್ವದಲ್ಲಿ ಬರುತ್ತದೆಯೋ, ಆ ವ್ಯಕ್ತಿಯ ಮೌಲ್ಯವೆಷ್ಟು? ಇವೆಲ್ಲವುಗಳ ಬಗ್ಗೆ ವಿಚಾರ ಮಾಡುವುದು ಗೋಳವಲಕರರಿಗೆ ಅನಿವಾರ್ಯವೆನಿಸುವುದಿಲ್ಲ. ನಿಜ ಹೇಳಬೇಕೆಂದರೆ ಯಾವ ಹಿಂದುತ್ವವಾದಿಯೂ ಈ ಬಗ್ಗೆ ವಿಚಾರ ಮಾಡುವುದಿಲ್ಲ. ಯಾಕೆಂದರೆ ಶಂಕರಾಚಾರ್ಯರ 'ನಿತ್ಯಾನಿತ್ಯ ವಸ್ತು ವಿವೇಕ' ದ ಸಿದ್ಧಾಂತವೇ ಅವರ ಮೂರುಗೋಲಾಗಿದೆ. ಗೋಳವಲಕರರು "ವಿಚಾರ ಧನ" ದ 'ಪರದು ವೈಭವದ ಮಾರ್ಗ' ದಲ್ಲಿ ಇದೇ ಸಿದ್ಧಾಂತದ ಆಧಾರದ ಮೇಲೆ ರಾಷ್ಟ್ರವಾದದ ವಿಶ್ಲೇಷಣೆಯನ್ನು ಮಾಡಿದ್ದಾರೆ. ಯಾವ ವ್ಯಕ್ತಿಯ ಸುಖ-ದುಃಖ, ರಾಗ ಭೋಗ, ಪ್ರೇಮ-ದ್ವೇಷ, ಶೂರತ್ವ-ಭೀರುತ್ವ ವಾಸನೆ-ಕಾಮನೆಗಳಿಗಾಗಿ ಸಮಾಜ, ರಾಜ್ಯ, ರಾಷ್ಟ್ರ, ಧರ್ಮ ಇತ್ಯಾದಿ ಸಂಸ್ಥೆಗಳ ಅಗತ್ಯವಿದೆಯೋ ಅವನನ್ನು ಮತ್ತು ಅವನ ಎಲ್ಲ ವಿಕಾರಗಳನ್ನು ಅವರು ಕ್ಷುಪದಾರ್ಥ ಮತ್ತು ತುಚ್ಛವೆಂದು ತಿಳಿದು ಕೇವಲ ಭಕ್ತಿಯ ಗೌರವ-ಗಾಯನ ಮಾಡಿದ್ದಾರೆ. ಆದ್ದರಿಂದ ಗೋಳವಲಕರರು ಹೇಳುವುದೇನೆಂದರೆ, "ಅನಂತ ಪೀಳಿಗೆಗಳು ಬಂದವು ಮತ್ತು ಹೋದವು. ಆದರೆ ರಾಷ್ಟ್ರವು ಉಳಿದುಕೊಂಡಿವೆ....ರಾಷ್ಟ್ರ ಜೀವನವು 'ನಿತ್ಯ' ವಾಗಿದೆ ಮತ್ತು ವ್ಯಕ್ತಿಯು 'ಅನಿತ್ಯ' ನಾಗಿದ್ದಾನೆ. ಆದ್ದರಿಂದ ಸಮಾಜ-ವ್ಯವಸ್ಥೆಯಲ್ಲಿ 'ಅನಿತ್ಯ' ನಾದ ವ್ಯಕ್ತಿಯು 'ನಿತ್ಯ' ಸಮಾಜದ ಹಿತ ಸಂರಕ್ಷಿಸುವ ಸಾಧನವಾಗುತ್ತಾನೆ" (ಪುಟ-೩೫) ಶಂಕರಾಚಾರ್ಯರ ಸಾಧನ-ಸಾಧ್ಯ ಸಿದ್ಧಾಂತದ ಬಗ್ಗೆ ಹಿಂದುತ್ವವಾದಿಗಳು ಮತ್ತು ಪ್ರಜಾತಾಂತ್ರಿಕ ಸಮಾಜವಾದಿಗಳು ಸ್ವೀಕರಿಸಿದ ಅರ್ಥಗಳಲ್ಲಿ ಆಕಾಶ-ಪಾತಾಳದ ಅಂತರವಿದೆ. ಸಾಧ್ಯ ಯಾವುದು? ಸಾಧನ ಯಾವುದು? ರಾಷ್ಟ್ರವು ವ್ಯಕ್ತಿ ಸಮೂಹಕ್ಕಾಗಿದೆಯೋ ಅಥವಾ ವ್ಯಕ್ತಿಯು ರಾಷ್ಟ್ರಕ್ಕಾಗಿಯೋ? ರಾಜ್ಯವು ಸಾಧನವಾಗಿದ್ದು ವ್ಯಕ್ತಿಯು ಸಾಧ್ಯವಾಗಿರಬೇಕೋ ಅಥವಾ ವ್ಯಕ್ತಿಯೇ ಸಾಧನವಾಗಿರಬೇಕೋ? ಸಮಾಜವು ವ್ಯಕ್ತಿಯ ಉನ್ನತಿಗಾಗಿದೆಯೋ ಅಥವಾ ವ್ಯಕ್ತಿಯೇ ಸಮಾಜಧಾರಣೆಗಾಗಿಯೋ? ಈ ಪ್ರಶ್ನೆಗಳ ಬಗ್ಗೆ ಮೂಲಭೂತ ಸ್ವರೂಪದ ಮತಭೇದಗಳಿವೆ ಮತ್ತು ಅವು ಎಂದೆಂದೂ ಇರುತ್ತವೆ.

• • •

ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಅಭಿಪ್ರೇತವಾದ ರಾಷ್ಟ್ರೀಯತೆಯ ಸ್ಪಷ್ಟ ಸಂಕೇತವು ಅವರ ಹಿಂದುತ್ವವೇ 'ರಾಷ್ಟ್ರೀಯತ್ವ' ಎಂಬ ಘೋಷಣೆಯಲ್ಲಿಯೇ ಕಂಡುಬರುತ್ತದೆ. ನಮ್ಮ ದೇಶದಲ್ಲಿ ಬಹುಸಂಖ್ಯ ಸಮಾಜವು ಹಿಂದುವಾಗಿದೆ. ಅವರಲ್ಲಿ ಅಧಿಕರು ಕಡು ಬಡತನದ ರೇಖೆಗಿಂತ ಕೆಳಗಿನ ಸ್ತರದಲ್ಲಿ ಜೀವಿಸುತ್ತಿದ್ದಾರೆ. ಇಂತಹ ಜನರ ಬಗ್ಗೆ ಸಂಘವು ಯಾವ ರಾಷ್ಟ್ರೀಯತೆಯನ್ನು ನಿರ್ಧರಿಸುತ್ತದೆ? ಈ ಪ್ರಶ್ನೆಯ ಉತ್ತರವನ್ನು ಪಡೆಯಲು ಭಾರತೀಯ ಇತಿಹಾಸದ ಮೊರೆಹೋಗಬೇಕಾಗುವುದು. ವಾಸ್ತವಿಕವಾಗಿ ಭಾರತೀಯರನ್ನು 'ಹಿಂದು' ಗಳೆಂದು ಉಲ್ಲೇಖಿಸಿರುವುದು ತೀರ ಇತ್ತೀಚೆಗೆ. ವಿದೇಶೀಯರೇ ಭಾರತೀಯರನ್ನು ಹಿಂದುಗಳೆಂದು ಕರೆದರು. ಸಿಂಧೂ ನದಿಯ ದಡದಲ್ಲಿ ನಿವಾಸಿಸುವವರಾಗಿದ್ದರಿಂದ ವಿದೇಶೀಯರು ನಮ್ಮನ್ನು 'ಸಿಂಧೂ' ಎಂದು ಕರೆದರು. ಆದರೆ ಅವರು 'ಸ' ಅಕ್ಷರವನ್ನು 'ಹ' ಎಂದು ಉಚ್ಚರಿಸುತ್ತಿದ್ದರು. ಆದ್ದರಿಂದ ನಮಗೆ 'ಸಿಂಧೂ ಜನರು' ಎನ್ನುವುದಕ್ಕೆ ಬದಲಾಗಿ 'ಹಿಂದೂ ಜನ' ರೆಂದು ಕರೆದಿರುವುದಾಗಿ ಇತಿಹಾಸಕಾರರು ತಿಳಿಯುತ್ತಾರೆ. ಯೂರೋಪೀಯ ಭಾಷೆಯಲ್ಲಿ 'ಸ' ಅಕ್ಷರವು 'ಹ' ಎಂದು ಉಚ್ಚರಿಸಲ್ಪಡುವುದನ್ನು ಗೋಳವಲಕರರು ಒಪ್ಪುತ್ತಾರೆ. (ಪುಟ-೮೮). ಭಾರತಕ್ಕೆ ಬರುವ ಪೂರ್ವದಲ್ಲಿ ವಿದೇಶೀಯರು ಭಾರತೀಯ 'ಹಿಂದು' ಗಳೆಂದು ಗುರುತಿಸುತ್ತಿರಲಿಲ್ಲ. ಯಾಕೆಂದರೆ 'ಹಿಂದೂ' ಶಬ್ದವು ಸಂಪೂರ್ಣವಾಗಿ ಪ್ರಾದೇಶಿಕವಾಗಿದೆ (ಸಿಂಧೂ ತಟದ ನಿವಾಸಿಗಳು, 'ಸಿಂಧೂ'-'ಹಿಂದೂ'). 'ಹಿಂದೂ' ಶಬ್ದಕ್ಕಿಂತ 'ಭಾರತ' ಶಬ್ದವು ನಿಶ್ಚಿತವಾಗಿ ವೇದಕಾಲದಷ್ಟು ಪುರಾತನವಾಗಿದೆ. ಗೋಳವಲಕರರ ವಿಚಾರದಂತೆ ಈ ಅರ್ಥದಲ್ಲಿ ಅದು ಹಿಂದುಗಳ ಪರ್ಯಾಯವಾಚಿ ಶಬ್ದವಾಗಿದೆ. 'ಹಿಂದೂ' ಎಂಬ ಹೆಸರು ವಿದೇಶೀಯರಿಂದ ಕೊಡಲ್ಪಟ್ಟಿದೆ ಮತ್ತು ಋಗ್ವೇದದಲ್ಲಿ ಇಲ್ಲಿಯ ಜನರನ್ನು 'ಸಪ್ತಸಿಂಧೂ' ಎನ್ನಲಾಗಿದೆಯೇ ಹೊರತು 'ಹಿಂದೂ' ಎಂದಲ್ಲ. ಇದನ್ನು ಒಪ್ಪಿಕೊಂಡಾಗ್ಯೂ ಗೋಳವಲಕರರು 'ಭಾರತೀಯ' ಶಬ್ದದ ಬದಲಾಗಿ 'ಹಿಂದೂ' ಶಬ್ದದ ಬಗ್ಗೆ ಯಾಕೆ ಇಷ್ಟೊಂದು ಆಗ್ರಹ ಮಾಡುತ್ತಾರೆ? ಅವರು ಹೇಳುವುದೇನೆಂದರೆ "ಭಾರತೀಯ" ಶಬ್ದದಿಂದ ಗೊಂದಲ ಉಂಟಾಗುವ ಸಾಧ್ಯತೆ ಇದೆ. 'ಹಿಂದೂ ಶಬ್ದವೊಂದೇ ನಮಗೆ ಅಭಿಪ್ರೇತವಾದ ಅರ್ಥವನ್ನು ಸುಸ್ಪಷ್ಟವಾಗಿ ಮತ್ತು ವ್ಯಕ್ತಮಾಡುತ್ತದೆ (ಪುಟ-೮೮).

• • •

ಚಾತುರ್ವರ್ಣವೆಂದರೆ ಸರ್ವಶಕ್ತಿವಂತನಾದ ಪರಮೇಶ್ವರನ ಚತುರ್ವಿಧ ಸ್ವರೂಪವೇ ಆಗಿದೆ. ತಮ್ಮ-ತಮ್ಮ ಪದ್ಧತಿ, ಶಕ್ತಿಗಳಿಗನುಸಾರವಾಗಿ ಎಲ್ಲರೂ ಅದನ್ನು ಪೂಜಿಸಬೇಕು. ಜ್ಞಾನ ದಾನ ಮಾಡುವುದರಿಂದಾಗಿ ಬ್ರಾಹ್ಮಣನು ಹೇಗೆ ಶ್ರೇಷ್ಠನೋ ಹಾಗೆಯೇ ಶತ್ರುಗಳ ವಿನಾಶ ಮಾಡುವುದರಿಂದಾಗಿ ಕ್ಷತ್ರಿಯನು ಶ್ರೇಷ್ಠನು. ವ್ಯಾಪಾರ ಮಾಡುವ ವೈಶ್ಯ, ಕೃಷಿಕ ಹಾಗೂ ಸಮಾಜದ ಸೇವೆ ಮಾಡುವ ಶೂದ್ರನ ಸ್ಥಾನವೂ ಕಡಿಮೆಯದೇನಲ್ಲ". ಚಾತುರ್ವರ್ಣ್ಯದ ಈ ಸ್ವರೂಪವು ಭಾರತದಲ್ಲಿ ಎಂದು ಇದ್ದಿತು? ಇದರ ಸಮಯದ ಬಗ್ಗೆ ಗೋಳವಲಕರರಾಗಲಿ ಹಿಂದುತ್ವವಾದಿಗಳೇ ಆಗಲಿ ಯಾವ ವಿವರಣೆಗಳನ್ನೂ ನೀಡುವುದಿಲ್ಲ. ಕಾಲದಲ್ಲಿ ಯಾವುದು ಸಾಮಾಜಿಕ ಪ್ರತಿಷ್ಠೆಯ ನಿಕಷವಾಗಿತ್ತು? ಆ ಸಾಮಾಜಿಕ ಪ್ರತಿಷ್ಠೆಗೆ ಯಾವುದು ಆಧಾರವಾಗಿತ್ತು? ಶ್ರಮವೋ, ವಿದ್ವತ್ತೆಯೋ, ಸಂಪತ್ತೋ? ಈ ಪ್ರಶ್ನೆಗಳಿಗೆ ಉತ್ತರಿಸುವುದು ಹಿಂದುತ್ವವಾದಿಗಳಿಗೆ ಕಠಿಣವಾಗಿದೆ. ಭಾರತೀಯ ಸಮಾಜದಲ್ಲಿ ವ್ಯಕ್ತಿ ಪ್ರತಿಷ್ಠೆಯು ಸಂಪತ್ತಿನ ಆಧಾರದ ಮೇಲೆ ನಿರ್ಧರಿಸಲ್ಪಡುವುದಿಲ್ಲವೆಂಬ ಭ್ರಮಪೂರ್ಣ ವಿಚಾರವನ್ನು ಪ್ರಸ್ತುತಪಡಿಸುವ ಒಂದು ತಪ್ಪು ಪದ್ಧತಿಯನ್ನು ಭಾರತೀಯ ವಿಚಾರಕರು ತಮ್ಮದಾಗಿಸಿಕೊಂಡಿದ್ದಾರೆ.

ಹಿಂಬಪು

ವಿಚಾರ

ತನ್ನ ವರ್ಗ-ವರ್ಚಸ್ಸನ್ನು ಉಳಿಸಿಕೊಳ್ಳುವದಕ್ಕಾಗಿ ಅವ್ಯಾಹತವಾಗಿ ಸಾಮಾನ್ಯ ಜನರ ಶೋಷಣೆ ಮಾಡುತ್ತದೆ. ವಿಷಮ ಭೌತಿಕ ಪಾತಳಿಯ ನಿರ್ಮಾಣಕ್ಕೆ ಇದೇ ಪ್ರಮುಖ ಕಾರಣವಾಗಿದೆ. ಇಂತಹ ಸಮಾಜದಲ್ಲಿ ಕೂಲಿಕಾರ, ಶ್ರಮಜೀವಿ, ಭೂಮಿ ಹೀನ, ಕೃಷಿ-ಕೂಲಿಕಾರ ಮತ್ತು ಮತ್ತು ಬಡಜನರು ಶ್ರೀಮಂತ ವರ್ಗದ ಗುಲಾಮರಾಗುತ್ತಾರೆ. ಇಂತಹ ಅಸಂಖ್ಯ ಗುಲಾಮರು ತಮ್ಮ ವ್ಯಕ್ತಿಗತ ವಿಶೇಷತೆಯನ್ನು ಉಳಿಸಿಕೊಳ್ಳಬೇಕು ಅಂದರೆ ಅವರು ಮಾಡಬೇಕಾದದ್ದಾದರೂ ಏನು ? ತನ್ನ ಪಾಲಿಗೆ ಬಂದ ದಾರಿದ್ರ್ಯ, ಮಾನಹಾನಿ, ಅಪಮಾನಗಳನ್ನು ಈ ವರ್ಗವು ತನ್ನ ಪೂರ್ವಜನ್ಮದ ಕರ್ಮ ಫಲವೆಂದು ತಿಳಿದು ಸುಮ್ಮನೆ ಕುಳಿತಿರಬೇಕೆ ? ಮತ್ತು ತನ್ನ ಶ್ರಮದಿಂದ ಸಂಪತ್ತನ್ನು ಉತ್ಪಾದಿಸಿ ಅದನ್ನು ಪ್ರಾಮಾಣಿಕವಾಗಿ ತಮ್ಮ ತಮ್ಮ ಮಾಲಿಕರಿಗೆ ಒಪ್ಪಿಸಬೇಕೇ ? ಗೋಳವಲಕರರು ವಿಷಮ ಭೌತಿಕ ಪಾತಳಿಯ ಮೇಲೆ ನಿಂತ ಯಾವ ಸಮಾಜವನ್ನು ಹಿಂದೂ ಸಂಸ್ಕೃತಿಯ ವ್ಯವಚ್ಛೇದಕ ಲಕ್ಷಣವೆಂದು ತಿಳಿದು ಅಟ್ಟಹಾಸದಿಂದ ಸಮರ್ಥಿಸುತ್ತಾರೋ ಆ ಸಮಾಜದಲ್ಲಿ 'ಶ್ರೀಮಂತರ' 'ಶ್ರೀಮಂತಿಕೆ' ಮತ್ತು 'ಗುಲಾಮ' ರ 'ಗುಲಾಮಗಿರಿ' ಯೇ ಏಕಮಾತ್ರ ವಿಶೇಷತೆಯಾಗಿರುತ್ತದೆ. ಇಂದಿನ ಭಾರತೀಯ ಸಮಾಜವು ಈ ವಿಶೇಷತೆಯನ್ನು ಉಳಿಸಿಕೊಳ್ಳಬೇಕೆ ?

* * *

ಭಾರತೀಯ ಸಮಾಜವು ಇಂದು ಸ್ವಧರ್ಮಾಚರಣೆಯನ್ನು ತೊರೆದದ್ದು ನಾವು ಕಾಣುತ್ತೇವೆ. ಶೂದ್ರ, ಕೃಷಿಕ ಹಾಗೂ ಕೂಲಿಕಾರರು ಹೊಲ ಹಾಗೂ ತಮ್ಮ ಕೆಲಸವನ್ನು ಬಿಟ್ಟು ಚುನಾವಣೆಯಲ್ಲಿ ಸ್ಪರ್ಧಿಸಿ ಕ್ಷತ್ರಿಯರಾಗುತ್ತಾರೆ. ಶ್ರೀಮಂತ ಬ್ರಾಹ್ಮಣರು ಬ್ರಹ್ಮ-ಜಪವನ್ನು ಬಿಟ್ಟು ಬೂಟು-ಚಪ್ಪಲಿಗಳ ಕಾರಖಾನೆ ನಡೆಸಿ ಶೂದ್ರರಾಗುತಾರೆ. ಬಹುಜನ ಸಮಾಜವು ತನ್ನ ಕೆಲಸವನ್ನು ಬಿಟ್ಟು ವಿದ್ಯಾರ್ಜನೆ ಮತ್ತು ವಿದ್ಯಾದಾನ ಮಾಡುತ್ತಲಿದೆ. ನಾವು ಮುಸಲ್ಮಾನ ಹಾಗೂ ಯುರೋಪಿನ ಸಂಸ್ಕೃತಿಯಿಂದ ಕೆಲವು ಪ್ರೇರಣೆಗಳನ್ನು ಪಡೆದಿದ್ದೇವೆ ಮತ್ತು ಅವರ ಪದ್ಧತಿಗಳನ್ನು ಸ್ವೀಕರಿಸಿದ್ದೇವೆ. ಇದರ ಫಲವಾಗಿ ಸಾಮಾಜಿಕ ಅಭಿಸರಣ ಪ್ರಾರಂಭವಾಗಿದೆ. ಇದು ಸರಿಯೋ ತಪ್ಪೋ ? ಗತಿಶೀಲತೆ ಮತ್ತು ಅಭಿಸರಣ ಇವು ಇಂದಿನ ಯುಗದ ವ್ಯವಚ್ಛೇದಕ ಲಕ್ಷಣಗಳಾಗಿವೆ. ಗೋಳವಲಕರರಿಗೆ ಇವು ಮಾನ್ಯವಿಲ್ಲ. ಇದನ್ನು ಅವರು ಹಿಂದೂಪದ್ಧತಿಯ ವಿರುದ್ಧವೆಂದು ತಿಳಿಯುತ್ತಾರೆ. ಅವರು ಹೇಳುವುದೇನೆಂದರೆ-"ಈ ಪವಿತ್ರ ಭೂಮಿಯ ರಾಷ್ಟ್ರೀಯ ಆತ್ಮದ ವಿರುದ್ಧ ಜ್ಯೋತಿಯನ್ನು ಮಗದೊಮ್ಮೆ ಪ್ರಜ್ವಲಗೊಳಿಸಲು, ಹಿಂದೂ ಮನದಲ್ಲಿರುವ ಅಮರ ಅಗ್ನಿಯ ಮೇಲೆ ಮುಸುಕಿದ ಆತ್ಮ ವಿಸ್ಮೃತಿ ಮತ್ತು ಪರಾನುಕರಣೆಯ ಬೂದಿಯನ್ನು ಝಾಡಿಸಿ ಹಿಂದೂ-ಜೀವನ ಪದ್ಧತಿಯನ್ನು ಪುನರುಜ್ಜೀವಿತಗೊಳಿಸುವದೇ ಇಂದಿನ ರಾಷ್ಟ್ರ ಧರ್ಮವಾಗಿದೆ". (ವಿಚಾರಧನ, ಪುಟ-೫೪). ಈ ಹಿಂದೂ ದೃಷ್ಟಿಕೋನವೇ 'ಹಿಂದೂಸ್ತಾನದ ವಿಧಾಯಕ ದೃಷ್ಟಿಕೋನ' ವಾಗಿದೆ ಎಂಬುದನ್ನು ಗೋಳವಲಕರರು ಸ್ಪಷ್ಟಪಡಿಸಿದ್ದಾರೆ. ನಮ್ಮ ರಾಷ್ಟ್ರದ ಗೌರವವು ಇಂದಿಗೂ ನಷ್ಟವಾಗಿಲ್ಲ. ಗೋಳವಲಕರರು ಅದರ ನೆನಪು ಮಾಡಿಕೊಡುತ್ತಾರೆ-"ಯಾವ ಗೌರವ ಸಂಪನ್ನ ಪರಂಪರೆಯಲ್ಲಿ ವಶಿಷ್ಟ, ವಿಶ್ವಾಮಿತ್ರ, ಚಾಣಕ್ಯ, ವಿದ್ಯಾಚರಣ, ಸಮರ್ಥ ರಾಮದಾಸರು ನಿರ್ಮಿತರಾದರೋ, ಶ್ರೀರಾಮ, ಚಂದ್ರಗುಪ್ತ, ಕೃಷ್ಣದೇವರಾಯ ಮತ್ತು ಶಿವಾಜಿ ಇವರ ರೂಪದಲ್ಲಿ ಯಾವುದು ಪಲ್ಲವಿತವಾಯಿತೋ ಅದನ್ನು ನಾವು ಪುನರುಜ್ಜೀವಿತಗೊಳಿಸೋಣ" (ವಿಚಾರಧನ, ಪುಟ-೬). ಗೋಳವಲಕರರ ಈ ಪರಂಪರೆಯನ್ನು ಸರಿಯಾಗಿ ಪರೀಕ್ಷಿಸಿಕೊಳ್ಳ

ಸಂಗ್ರಹ : **ದೇವಯ್ಯ ಹರವೆ**

ಬೇಕು. ಇವರಲ್ಲಿ ಬುದ್ಧ, ಮಹಾವೀರ, ಚಾರ್ವಾಕ ತುಕಾರಾಮ, ಅಶೋಕ, ಅಕಬರ ಇತ್ಯಾದಿ ಹೆಸರುಗಳು ಇಲ್ಲ. ಆದ್ದರಿಂದ ಗೋಳವಲಕರರು ಹೇಳಿದ ಪರಂಪರೆಯು ಬ್ರಾಹ್ಮಣ ವರ್ಚಸ್ಸಿನ ಸಮಾಜ ಪರಂಪರೆಯಾಗಿದ್ದು ಅದರ ಪುನರುಜ್ಜೀವನ ಮಾಡುವದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖ ಕಾರ್ಯವಾಗಿದೆ. ಇದನ್ನು ಗೋಳವಲಕರರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯ ಸ್ವರೂಪವನ್ನು ಸ್ಪಷ್ಟಪಡಿಸುವಾಗ ಜಾಹೀರು ಪಡಿಸಿದ್ದಾರೆ.

* * *

ಶಾಸನ ಸಂಸ್ಥೆಗಳಿಗಿಂತ ಮೊದಲು ಧರ್ಮವು ಸಮಾಜಧಾರಣೆಯ ಮಹತ್ವದ ಕಾರ್ಯವನ್ನು ಮಾಡುತ್ತಿತ್ತು. ಆದರೆ ಧರ್ಮ ಸತ್ತೆಯನ್ನು ಹೊಂದಿದ ವ್ಯಕ್ತಿಗಳು ಸರ್ವಸಂಗ ಪರಿತ್ಯಾಗಿ ಹಾಗೂ ಜೀತೇಂದ್ರಿಯ ಮಹಾ ಮಾನವನ ಆದರ್ಶವನ್ನು ಜನರ ಮುಂದಿಟ್ಟು ಅವರ ಶೋಷಣೆ ಮಾಡುತ್ತ ಸ್ವತಃ ತಾವು ಧನ-ವೈಭವಗಳಲ್ಲಿ ಮುಳುಗಿ ಹೋಗಿದ್ದರು. ಭಾರತೀಯ ಸಂಸ್ಕೃತಿಯಲ್ಲಿ ಯಾವನೊ ಒಬ್ಬ ರಾಜನು ಸರ್ವಸಂಗ ಪರಿತ್ಯಾಗ ಮಾಡಿದ ಋಷಿಗೆ ವಂದನೆ ಸಲ್ಲಿಸುತ್ತಿದ್ದ ಕಥೆಯನ್ನು ಗೋಳವಲಕರರು ಬಹಳ ಅಭಿಮಾನದಿಂದ ಹೇಳುತ್ತಾರೆ. ಆದರೆ ಜನರ ಶೋಷಣೆ ಮಾಡಿ ಪಡೆದ ಹಣವನ್ನು ಈ ರಾಜನು ತ್ಯಾಗ ಮಾಡಬಲ್ಲವನಾಗಿದ್ದನೇ ? ಭಣಂಗ ಋಷಿಗೆ ರಾಜರು ವಂದಿಸುತ್ತಾರೆಂದು ಭಾರತೀಯ ಸಂಸ್ಕೃತಿಯು ಶ್ರೇಷ್ಠವೆಂದನ್ನಿಕೊಳ್ಳುವದಾದರೆ ಜ್ಞಾನ ಸಂಪಾದನೆಗಾಗಿ ತಪಸ್ಸು ಮಾಡುತ್ತಿದ್ದ ಭಾವಿ ಋಷಿಯ ಶಿರಚ್ಛೇದನೆ ಮಾಡುವ ರಾಜರು ಯಾವ ಸಂಸ್ಕೃತಿಯಲ್ಲಿ ನಿರ್ಮಾಣ ಮಾಡುತ್ತಿದ್ದರೆಂದು ಹೇಳಬೇಕು ? ಇಂತಹ ರಾಜರು ಹಿಂದೂ ಸಂಸ್ಕೃತಿಯಲ್ಲಿ ಇರಲಿಲ್ಲವೆಂದು ಗೋಳವಲಕರರ ವಿಚಾರಧ ಬೆಂಬಲಿಗರು ಹೇಳುತ್ತಾರೇನು ? ಗೋಳವಲಕರ ಹಾಗೂ ಅವರ ಅನುಯಾಯಿಗಳು ಈ ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲ, ಕೊಡುವದೂ ಇಲ್ಲ. ಪ್ರಪಂಚದ ಎಲ್ಲ ಧರ್ಮಸತ್ತೆಗಳೂ ಧರ್ಮ ಗುರು ಮತ್ತು ರಾಜ್ಯಕರ್ತರನ್ನು ಸೇರಿಸಿ ಒಂದು ಶೋಷಕ-ವರ್ಗವನ್ನು ತಯಾರಿಸಿವೆ. ಹಿಂದೂ ಧರ್ಮಸತ್ತೆಯೂ ಅದಕ್ಕೆ ಅಪವಾದವಾಗಿಲ್ಲ. ಇಂತಹ ಇಬ್ಬರು ಶೋಷಕರಲ್ಲಿಯೂ ಅನೇಕ ಸಲ ಸಂಘರ್ಷಗಳಾಗಿವೆ. ನಮ್ಮ ಸಂಸ್ಕೃತಿಯಲ್ಲಿ ಕೂಡ ಉಪನಿಷದ್ ಕಾಲದಲ್ಲಿ ಬ್ರಾಹ್ಮಣ - ಕ್ಷತ್ರಿಯರಲ್ಲಿ ಸಂಘರ್ಷ ಉಂಟಾಗಿತ್ತು. ಕಠ, ಕೇನ, ಛಾಂದೋಗ್ಯ, ಬೃಹದಾರಣ್ಯಕ, ಮುಂಡಕ ಇತ್ಯಾದಿ ಉಪನಿಷತ್ತುಗಳಲ್ಲಿ ಈ ಮಾತಿಗೆ ಪ್ರಮಾಣಗಳು ಸಿಗುತ್ತವೆ. ಬುದ್ಧ, ಮಹಾವೀರರ ನಂತರ ಈ ವಿವಾದವನ್ನು ಕೊನೆಗೊಳಿಸುವದರಲ್ಲಿ ಗೀತೆಗೆ ಯಶಸ್ಸು ದೊರೆಯಿತು. ತಿರುಗಿ ಬ್ರಾಹ್ಮಣ ವರ್ಚಸ್ಸನ್ನು ಪ್ರಸ್ಥಾಪಿಸುವದರಲ್ಲಿ ಮನುಸ್ಮೃತಿಯು ಸಫಲವಾಯಿತು. ಗೀತೆ ಮತ್ತು ಮನುಸ್ಮೃತಿಗೆ ದೊರೆತ ಈ ಯಶಸ್ಸನ್ನು ಆಧುನಿಕ ಕಾಲದಲ್ಲಿಯೂ ಹೇಗೆ ಉಳಿಸಿಕೊಳ್ಳಬೇಕೆಂಬುದು ಹಿಂದುತ್ವವಾದಿಗಳ ಮುಂದಿರುವ ಜ್ವಲಂತ ಸಮಸ್ಯೆಯಾಗಿದೆ. ಈ ವರ್ಚಸ್ಸನ್ನು ಉಳಿಸಿಕೊಳ್ಳುವುದಕ್ಕಾಗಿ ಧರ್ಮ ಹಾಗೂ ಸಂಸ್ಕೃತಿಗೆ ಅಭಿಮಾನಾಸ್ಪದರಾದ ಐತಿಹಾಸಿಕ ಮಹಾಪುರುಷರ ಗೌರವ ಗಾನವನ್ನು ಹಾಡುವ ಒಂದು ವ್ಯಾಸ-ಪೀಠ ನಿರ್ಮಾಣ ಮಾಡಬೇಕೆನ್ನುವ ತನ್ನ ಸಮಸ್ಯೆಗೆ ಭಾರತದ ಆಧುನಿಕ ಶೋಷಕರು ೧೯೨೫ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ಥಾಪನೆಯ ರೂಪದಲ್ಲಿ ಪರಿಹಾರವನ್ನು ಕಂಡುಕೊಂಡರು. ಈ ಶೋಷಣೆಗೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿಸಿಕೊಡುವದಕ್ಕಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ಥಾಪನೆಯಾಗಿದೆ.

ಪಂಜು : ಆರ್. ಎಸ್. ಎಸ್. ಮೇಲೊಂದು ಕ್ಷ-ಕಿರಣ

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ಥಾಪನೆಯ ಕಾಲದಿಂದಲೇ ಅದರ ಅನುಯಾಯಿಗಳಲ್ಲಿ ತಮ್ಮ ಸಂಘಟನೆಯು ಅನ್ಯರಿಗಿಂತ ಹೆಚ್ಚು ರಾಷ್ಟ್ರವಾದಿಯಾಗಿದೆ ಎಂಬ ದರ್ಪವಿದೆ....ಸಂಘದ ದೃಷ್ಟಿಯಲ್ಲಿ ಹಿಂದುತ್ವವು ರಾಷ್ಟ್ರೀಯತ್ವದ ಪರ್ಯಾಯವಾಗಿದ್ದು "ನಮಗೆ ಈ ಭೂಮಿಗಿಂತ ಪವಿತ್ರವಾದದ್ದು ಇನ್ನೇನೂ ಇಲ್ಲ. ಈ ಭೂಮಿಮೇಲಿರುವ ಪ್ರತಿಯೊಂದು ದೂಳಿಕಣ, ಸಚೇತನ ಅಚೇತನಾ ವಸ್ತು, ಕಟ್ಟಿಗೆ, ಕಲ್ಲು, ವೃಕ್ಷ ಮತ್ತು ನದಿ ಪವಿತ್ರವಾಗಿದೆ". ಆದರೆ ಮನುಷ ನ ಪಾಡೇನು ? ಹಿಂದೂರಾಷ್ಟ್ರವಾದದ ಆಧಾರವಾದ ಮಾನವ ಸಮೂಹದ ಐಕ್ಯದ ಪಾಡೇನು ?

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸೈಧ್ಧಾಂತಿಕ ಕ್ರೌರ್ಯಗಳನ್ನು ಬಿಚ್ಚಿ ಬಿಚ್ಚಿ ತೋರುವ 'ಪಂಜು' ಪುಸ್ತಕದ ಆಯ್ದ ಭಾಗಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಆಧುನಿಕ ಕಾಲದ ವಿಚಾರ ಕ್ಷೇತ್ರದಲ್ಲಿ ತತ್ವ-ಪ್ರಣಾಲಿಗಳು ವಿಶ್ವ ಪಾತಳಿಯ ಮೇಲೆ ಜನ್ಮ ತಾಳಿದವು. ಇದರ ಪರಿಣಾಮ ಸ್ವರೂಪವಾಗಿ ವ್ಯಕ್ತಿ ಮತ್ತು ಸಮಾಜದ ಅನ್ಯೋನ್ಯ ಸಂಬಂಧದ ಚರ್ಚೆ ಪ್ರಾರಂಭವಾಗಿದ್ದರಿಂದ ವ್ಯಕ್ತಿ ವಿಕಾಸಕ್ಕೆ ಅವಶ್ಯಕವಾದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ 'ಸಮತೆ'ಯ ಭಾವನೆಯು ಅಧಿಕಾಧಿಕ ಸಮೃದ್ಧವಾಗುತ್ತಲಿದೆ. ಪ್ರಜಾತಂತ್ರ, ಸಾಮ್ಯವಾದ ಮತ್ತು ಸಮಾಜವಾದದ ಆಧುನಿಕ ತತ್ವ ಪ್ರಣಾಲಿಗಳನ್ನು ಅನೇಕ ದೇಶಗಳು ಸ್ವೀಕರಿಸಿವೆ. ಸಮಾಜ ಮತ್ತು ರಾಷ್ಟ್ರದ ನಿರ್ಮಾಣ ಮಾನವೀಯ ನ್ಯಾಯ'ದ ಆಧಾರದ ಮೇಲೆ ಆಗಬೇಕು ಮತ್ತು ಈ 'ನ್ಯಾಯ' ತತ್ವಕ್ಕೆ ಸಮತೆಯು ಅದಿಷ್ಠಾನ ಪ್ರಾಪ್ತವಾಗಬೇಕು ಎಂಬುದೇ ಈ ತತ್ವ ಪ್ರಣಾಲಿಗಳ ಆಶಯ. ಇಷ್ಟೇ ಅಲ್ಲ. ಶೋಷಣ ಮುಕ್ತ ಸಮಾಜದ ಆಧಾರದ ಮೇಲೆ ರಾಷ್ಟ್ರ ನಿರ್ಮಾಣ ಮಾಡಿದ ಹೊರತು ಅಂತರ್ರಾಷ್ಟ್ರೀಯ ಸಾಮಂಜಸ್ಯದ ಸ್ಥಾಪನೆ ಆಗಲಾರದು ಮತ್ತು ಇಂಥಹ ಸಾಮಂಜಸ್ಯದಿಂದಲೇ ವಿಶ್ವ ರಾಜ್ಯದ ಕಲ್ಪನೆಯು ಸಾಕಾರವಾಗಬಲ್ಲದು ಎಂಬುದು ಈ ಆಧುನಿಕ ತತ್ವ ಪ್ರಣಾಲಿಗಳ ಅಭಿಪ್ರಾಯವಾಗಿದೆ. ಆದರೂ ಈ ತತ್ವ ಪ್ರಣಾಲಿಗಳಲ್ಲಿ ಸಣ್ಣ-ಪುಟ್ಟ ಮತ ಭೇದಗಳಿವೆ.

ಗೋಳವಲಕರ ಗುರೂಜಿಯವರಿಗೆ ಈ ಎಲ್ಲ ಆಧುನಿಕ ವಾದ ಮತ್ತು ತತ್ವ ಪ್ರಣಾಲಿಗಳಲ್ಲಿ ನಂಬಿಕೆ ಇಲ್ಲ. ಯಾಕೆಂದರೆ ಅವರ ಅಭಿಪ್ರಾಯದಂತೆ ರಾಷ್ಟ್ರವಾದಿ ವಿಚಾರವು ಮನುಷ್ಯನ ಪ್ರಾಕೃತಿಕ ಭಾವನೆಯಾಗಿದೆ, ಆದ್ದರಿಂದ ವಿಶ್ವ-ವೈಚಾರಿಕ-ಸ್ತರದಲ್ಲಿ ಹುಟ್ಟಿದ ಯಾವುದೇ ತತ್ವ ಅಥವಾ ವಾದ (ಇಜ್ಮ) ಭಾರತೀಯ ಜನತೆಯ ಸಮಸ್ಯೆಗಳನ್ನು ಬಿಡಿಸಲಾರದು. ಈ ಆಧುನಿಕ ತತ್ವ ಪ್ರಣಾಲಿಗಳ ಮೇಲೆ ರೋಷಪೂರ್ಣ ಪ್ರಹಾರ ಮಾಡುತ್ತ ಗೋಳವಲಕರರು, "ಪ್ರಪಂಚದ

ಪಂಜು

ಆರೆಸ್ಸೆಸ್ ಮೇಲೊಂದು ಕ್ಷಕಿರಣ

ಮೂಲ ಮರಾಠಿ ಲೇಖಕ :

ಪ್ರೊ || ರಾವ್‌ಸಾಹೇಬ್ ಕಸಬೆ

ಅನುವಾದ :

ದತ್ತಾತ್ರೇಯ ಪೂಜಾರಿ

ಪುಟ : 116 ಬೆಲೆ : 10-00

ಸಂಕ್ರಮಣ ಪ್ರಕಾಶನ, ದಾರವಾಡ-580008

ಎಲ್ಲ ಮನುಷ್ಯರನ್ನು ಒಂದು ಸಮಾನ ಭೌತಿಕ ಪಾತಳಿಯ ಮೇಲೆ ತಂದು ಅವರ ವೈಯಕ್ತಿಕ ಅಥವಾ ಸಾಮಾನ್ಯ ವಿಶೇಷತೆಗಳನ್ನು ನಷ್ಟಗೊಳಿಸಿ ಶಾಸನ-ವಿಹೀನ ಸಮಾಜ ನಿರ್ಮಾಣ ಮಾಡುವ ಉದ್ದೇಶ ನಮ್ಮ ಪರಂಪರೆಗೆ ಪೂರ್ಣತಃ ವ್ಯತಿರಿಕ್ತವಾಗಿದೆ" ಎಂದು ಹೇಳಿದ್ದಾರೆ. (ವಿಚಾರಧನ-ಪುಟ ೮). ಅರ್ಥಾತ್ ಭಾರತೀಯ ಹಿಂದೂ ಪರಂಪರೆಗೆ ಯಾವುದು ವಿಸಂಗತವೋ ಅದನ್ನು ನಾವು ಎಂದಿಗೂ ಸ್ವೀಕರಿಸಲೇಬಾರದು. ಇವನ್ನೇ ಮುಂದುವರೆಸುತ್ತ, 'ವಿಷಮ ಭೌತಿಕ ಸ್ಥಿತಿ' ಅಥವಾ 'ಆರ್ಥಿಕ ವಿಷಮತೆಯೇ ಭಾರತೀಯ ಸಂಸ್ಕೃತಿಯ ಏಕಮಾತ್ರ ವ್ಯವಚ್ಛೇದಕ ಲಕ್ಷಣವಾಗಿದೆ' ಎಂಬುದನ್ನು ಗೋಳವಲಕರರು ಯಾವ ಮುಚ್ಚುಮರೆಯೂ ಇಲ್ಲದೆ ಸ್ಪಷ್ಟ ಪಡಿಸಿದ್ದಾರೆ. ವಾಸ್ತವವಾಗಿ ರಾಷ್ಟ್ರೀಯ ಅಥವಾ ಅಂತರ್ರಾಷ್ಟ್ರೀಯ ಮಾನವ ಸಮೂಹವನ್ನು ಒಂದು ಸಮಾನ ಭೌತಿಕ ಆಧಾರದ ಮೇಲೆ ನಿಲ್ಲಿಸದೆ ಅದರ ವ್ಯಕ್ತಿಗತ ಹಾಗೂ ಸಾಮೂಹಿಕ ವಿಶೇಷತೆಗಳು ಹೇಗೆ ತಾನೇ ಸುರಕ್ಷಿತವಾಗಿರಬಲ್ಲವು ? ವ್ಯಕ್ತಿ ವಿಕಾಸದ ಅವಕಾಶ ಅದಕ್ಕೆ ಹೇಗೆ ತಾನೇ ದೊರಕೀತು ?. ಈ ಪ್ರಶ್ನೆಗಳ ಸಂಪೂರ್ಣ ವಿಶ್ಲೇಷಣೆ ಆಗಲೇಬೇಕು. ಆಧುನಿಕ ವಿಚಾರ ಪ್ರಣಾಲಿ (ಪ್ರಜಾತಂತ್ರ, ಸಾಮ್ಯವಾದ, ಸಮಾಜವಾದ) ಗಳ ಅಭಿಪ್ರಾಯದಂತೆ ಸಮಾಜದ ವ್ಯಕ್ತಿ ಸಮೂಹವನ್ನು ಸಮಾನ ಭೌತಿಕ ಆಧಾರದ ಮೇಲೆ ನಿಲ್ಲಿಸಿದ ಹೊರತು ಅದರ ವ್ಯಕ್ತಿಗತ ಹಾಗೂ ಸಾಮೂಹಿಕ ವಿಶೇಷತೆಗಳು ಸುರಕ್ಷಿತವಾಗಿರುವದು ಸಾಧ್ಯವಿಲ್ಲ ಮತ್ತು ವ್ಯಕ್ತಿ ವಿಕಾಸದ ಅವಕಾಶವೂ ಅದಕ್ಕೆ ಸಿಗುವುದಿಲ್ಲ.

ಶ್ರೀ ಗೋಳವಲಕರ ಗುರೂಜಿಯವರ ಭಾಷಣಗಳು ಭಾಷಾ ಸೌಂದರ್ಯದ ದೃಷ್ಟಿಯಿಂದ ಎಷ್ಟು ಆಕರ್ಷಕವಾಗಿರುತ್ತವೆಯೆಂದರೆ ಅವರ ಭಾಷಣದ ಭಾಷಾ ಸೌಂದರ್ಯ ಹಾಗೂ ಗತೇತಿಹಾಸದ ಅಭಿನಿವೇಶದ ಕಡೆಗೆ ಆಕರ್ಷಿತರಾದ ತರುಣರಿಗೆ ಅವರ ವಿಚಾರಗಳ ತರ್ಕಹೀನತೆಯನ್ನು ಪರೀಕ್ಷಿಸುವ ವಿವೇಕ ಇರುವುದಿಲ್ಲ ಮತ್ತು ಆ ವಯಸ್ಸಿನಲ್ಲಿ ಅದು ಇರುವ ಸಂಭವವೂ ಇಲ್ಲ. ವಿವೇಕ ಜಾಗೃತವಾಗುವುದರಲ್ಲಿ ಸಮಯ ಕಳೆದು ಹೋಗಿರುತ್ತದೆ. ಆಮೇಲೆ ಮನಸ್ತಾಪಕ್ಕಿಂತ ಬೇರೇನೂ ಉಳಿದಿರುವುದಿಲ್ಲ.

ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಉಕ್ಕುತ್ತಿರುವ ರಕ್ತದ ತರುಣರ ಸಂಘಟನೆ ಮಾಡುವುದರಲ್ಲಿ ಯಶ ಸಂಪಾದಿಸಿದ ಹಾಗೆಯೇ ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ಕಾಲ ಮೀರಿಹೋದ ಮೇಲೆ ಜಾಗೃತವಾದ, ಮನಸ್ತಾಪದಿಂದ ದಗ್ಧವಾದ ಶಾಪಿತ ಪೀಳಿಗೆಯನ್ನು ಕೂಡ ನಿರ್ಮಿಸಿದೆ. ಮಾನವ ಸಮೂಹವನ್ನು ಸಮಾನ ಭೌತಿಕ ಪಾತಳಿಯ ಮೇಲೆ ತರುವದರ ಅರ್ಥ ಅವರ ವ್ಯಕ್ತಿಗತ ಮತ್ತು ಸಾಮೂಹಿಕ ವಿಶೇಷತೆಗಳನ್ನು ನಷ್ಟ ಮಾಡುವದೆಂಬ ಗೋಳವಲಕರರ ಸಮೀಕರಣವು ಎಷ್ಟು ತರ್ಕಹೀನವೋ ಅಷ್ಟೇ ಅದು ಸಮಾಜವಾದಿ ಸಮಾಜ ನಿರ್ಮಾಣದ ಕನಸನ್ನು ಸಾಕಾರ ಮಾಡುವದಕ್ಕಾಗಿ ಸಂಘಟಿಸಬೇಕಾದ ಜನ-ಆಂದೋಲನಗಳ ದೃಷ್ಟಿಯಿಂದಲೂ ಹಾನಿಕಾರಕವಾಗಿದೆ. ಸಮಾಜವು ವಿಷಮ ಭೌತಿಕ ಪಾತಳಿಯ ಮೇಲೆ ನಿಂತಾಗ ರಾಜಕೀಯ ಸತ್ತೆ ಮತ್ತು ಉತ್ಪಾದನಾ ಸಾಧನಗಳು ವಿಶಿಷ್ಟ ವರ್ಗದ ಜನರ ಖಾಸಗಿ ಸ್ವಾಮಿತ್ವದಲ್ಲಿ ಇರುತ್ತವೆ. ಈ ವರ್ಗವು

ಹೋಗಿ ಕಾಫಿ ಕುಡಿಯುವುದು. ಏನಾದರೂ ಗಲಾಟೆಯಾದರೆ ಹಿಂದಕ್ಕೆ ಮಾತ್ರ ಬರದೆ ಹೋರಾಡುತ್ತಲೇ ಸಾಯುವುದೆಂದು ನಿರ್ಧರಿಸಲಾಯ್ತು. ರಾತ್ರಿ ಅದೆಷ್ಟು ಬೇಗ ಕಳೆಯಿತೆಂದು ನಮಗೆ ಗೊತ್ತಾಗಲೇ ಇಲ್ಲ. ಬೆಳಿಗ್ಗೆ ಎದ್ದೊಡನೆ ಮತ್ತೆ ಯುವಕರೆಲ್ಲಾ ಒಂದು ಕಡೆ ಸೇರಿದೆವು. "ಹೋಟೆಲ್‌ನ ಖರ್ಚೆಲ್ಲಾ ನಂದು ಎಂದು ಕೆ. ಎಂ. ಪಂಚಲಿಂಗಯ್ಯ ಹೇಳಿದಾಗ ನಾವೆಲ್ಲಾ ಒಪ್ಪಿಕೊಂಡೆವು ಸುಮಾರು 25 ಹುಡುಗರು ಸವರ್ಣೀಯರ ಕೇರಿಯ ಕಡೆಗೆ ಹೊರಟು ನಿಂತಾಗ ನಮ್ಮ ಜನರೆಲ್ಲಾ ನಿಂತು ನಮ್ಮನ್ನೇ ನೋಡುತ್ತಿದ್ದರು. ಮೊದಲು ನಾವೆಲ್ಲ ಹಲ್ಲೆಗೆರೆ ಹೋಟೆಲ್‌ಗೆ ಹೋದಾಗ (ಹೋಟೆಲ್ ಯಜಮಾನ ಹಲ್ಲೆಗೆರೆ ಗ್ರಾಮದವನಾದ್ದರಿಂದ ಆ ಹೋಟೆಲ್‌ಗೆ ಹಲ್ಲೆಗೆರೆ ಹೋಟೆಲ್ ಎಂದೇ ಕರೆಯುವುದು ವಾಡಿಕೆ) ಆ ಹೋಟ್ಲಿನ ಯಜಮಾನನಿಗೆ ನಾವೆಲ್ಲಾ ಹೊಲೇರು ಅಂತ ಗೊತ್ತಾದಾಗ ಏನು ಮಾಡೂದಂತ ಯೋಚಿಸುವವನ ಹಾಗೆ ನಮ್ಮನ್ನೇ ನೋಡ್ತಾ ಹಾಗೇ ಕುಳಿತಿದ್ದ. ಅಜಾನುಬಾಹು ಮತ್ತು ದಪ್ಪ ಮೀಸೆ ಬಿಟ್ಟಿದ್ದ ನನ್ನ ಸ್ನೇಹಿತ ಶಿವಣ್ಣ "ರೀ ಬನ್ರಿ ಇಲ್ಲಿ, ನಮ್ ಹುಡ್ಗರಿಗೆಲ್ಲಾ ಕಾಫಿ ತಂದು ಕೊಡಿ" ಎಂದು ಜಬರ್‌ದಸ್ತಾಗೇ ಕೇಳಿದಾಗ ಒಳಗೋದವನು ಬಹಳ ಹೊತ್ತಿನ ನಂತರ ನಮಗೆಲ್ಲಾ ಕಾಫಿ ತಂದು ಕೊಟ್ಟೇಬಿಟ್ಟ. ನಮ್ಗೆಲ್ಲಾ ಆಶ್ಚರ್ಯದ ಜೊತೆಗೆ ಸಂತೋಷವೂ ಆಯ್ತು. ವಿಜಯೋತ್ಸಾಹದಿಂದ ಅದರ ಪಕ್ಕದ ಹೋಟಲ್ ಗಣೇಶ್ ಭವನ್‌ಗೆ ಧಾಳಿ ಇಟ್ಟೆವು. ನಾವೆಲ್ಲಾ ದಬದಬನೆ ಹೋಗಿ ಕುರ್ಚಿಯ ಮೇಲೆ ಕುಳಿತುಕೊಂಡಾಗಲೇ ಹೋಟ್ಲಿನ ಯಜಮಾನನ ಕಣ್ಣು ಕೆಂಪಗಾಗಿತ್ತು. ಹೋಟಲ್ ಯಜಮಾನನ ಮಗನೇ ಸಪ್ಲೈಯರ್ ಆಗಿದ್ದರಿಂದ ಅವನ ಮಗನೆ ನಮ್ಮ ಹತ್ತಿರ ಬಂದು "ಏನು ?" ಅಂದ. ನಾವೆಲ್ಲಾ 25 ಮಂದಿ ಇದ್ದೀವಿ ನಮ್ಗೆಲ್ಲಾ ಎರಡೆರಡು ದೋಸೆ ತಗಂಡು ಬಾ ಎಂದೆ. ಅವನು 'ಸ್ವಲ್ಪ ಜೋರಾಗಿಯೇ ದೋಸೆ ಇಲ್ಲಾ ಎಂದವನೇ ಹೊರಗೆ ಹೋದ ನಾನು ಸುತ್ತಲೂ ಕಣ್ಣಾಡಿಸಿದೆ. ಮೇಜಿನ ಮೇಲೆ ಬಜ್ಜಿಯಿಂದ ತುಂಬಿದ್ದ ದೊಡ್ಡ ಪ್ಲೇಟ್ ಕಣ್ಣಿಗೆ ಬಿತ್ತು. ಕೂಡಲೇ ನಾನು ಹೋಟ್ಲಿನ ಯಜಮಾನನನ್ನು ಕುರಿತು "ದೋಸೆ ಇಲ್ದೆ ಇದ್ರೆ ಹೋಗ್ಲಿ ಅಲ್ಲಿ ಬಜ್ಜಿ ಇದೆಯಲ್ಲಾ ಅದನ್ನೆ ಎಲ್ಲರಿಗೂ ಒಂದೊಂದು ಪ್ಲೇಟ್ ಕೊಡ್ರಿ" ಅಂದೆ. ಅವನು ಆದಕ್ಕೆ "ಅದೆಲ್ಲಾ ಬೇರೆಯವರಿಗೆ ಆರ್ಡರ್ ಆಗಿದೆ. ಏನೂ ಇಲ್ಲ ಹೋಗಿ" ಅಂದ. ಇದ ಕೇಳಿದ. ನನ್ನ ಸ್ನೇಹಿತ ಗುರುಸ್ವಾಮಿಗೆ ಬಹಳ ಕೋಪ ಬಂದಿತು. "ತಿಂಡಿ ಏನೂ ಇಲ್ದೆ ಇದ್ರೆ ಬೇಡ ಕಾಫಿನಾದ್ರೂ ಕೊಡಿ" ಅಂದ. ಆದಕ್ಕೆ ಅವನು "ಕಾಫಿಯೂ ಇಲ್ಲ, ಟೀಯೂ ಇಲ್ಲ, ಹಾಲು ಮುಗ್ದು ಹೋಗಿದೆ ಎದ್ದೋಗ್ರಿ" ಅಂದ. ನನಗೂ ಬಹಳ ಬಹಳ ಕೋಪ ಬಂದಿತ್ತು. ಕೂಡಲೇ ನಾನು 'ಏನೂ ಇಲ್ಲದಿದ್ರೆ ಬೇಡ ಎಲ್ಲರಿಗೂ ಒಂದೊಂದು ಲೋಟ ನೀರಾದ್ರೂ ಕೊಡಿ" ಎಂದೆ, ಅದಕ್ಕೆ ಹೋಟೆಲ್ ಯಜಮಾನ "ನೀರೂ ಇಲ್ಲ ಗೀರು ಇಲ್ಲಾ ಎದ್ದೋಯ್ತೀರೋ ಇಲ್ಲವೋ" ಅಂದ.

ಅಷ್ಟರಲ್ಲಿ ಹೊರಗೆ ಹೋಗಿದ್ದ ಹೋಟೆಲ್ ಯಜಮಾನನ ಮಗ ಸಪ್ಲೈಯರ್ ಸುಮಾರು ಮೂವತ್ತು ಹುಡುಗರನ್ನು ಕರೆದುಕೊಂಡು ಬಂದವನೆ "ಈ ಹೊಲೇರ್ಗೆಲ್ಲಾ ತಿಂಡಿ ಬೇಕಂತೆ ಕೊಡೊ" ಅಂದ. ಅವರೆಲ್ಲಾ ದೊಣ್ಣೆ-ಚಾಕುಗಳನ್ನು ತಂದಿದ್ದರು. ಕೂಡಲೇ ನಮ್ಮ ಹುಡ್ಗರು ಅವರವರು ತಂದಿದ್ದ ಆಯುಧಗಳನ್ನು ಹೊರಗೆ ತೆಗೆದು ಸಿದ್ಧರಾದರು. ಏನೂ ಆಯುಧ ತರದಿದ್ದ ನನ್ನ ಕೆಲವು ಗೆಳೆಯರು ಟೇಬಲ್ ಮೇಲಿದ್ದ ಗಾಜಿನ ಲೋಟವನ್ನೇ ತೆಗೆದುಕೊಂಡು "ಬನ್ರೋ ನಾವು ಎಲ್ಲದಕ್ಕೂ ಸಿದ್ಧವಾಗೇ ಬಂದಿದ್ದೀವಿ' ಅಂದಾಗ ನಮ್ಮನ್ನು ಹೊಡೆಯಲು ಬಂದವರ

ಅನುಭವದ ಗಣಿಯಿಂದ

ಎದೆ ನಡುಗಿರಬೇಕು, ಅವರೆಲ್ಲಾ ಒಬ್ಬೊಬ್ಬರೇ ಹಿಂದಕ್ಕೆ ಹೊರಟು ಹೋದರು. ಇಷ್ಟೆಲ್ಲಾ ನಡೆಯುವ ಹೊತ್ತಿಗೆ ಒಂದು ಗಂಟೆ ಕಳೆದಿತ್ತು. ನನ್ನ ಸ್ನೇಹಿತರಲ್ಲಿ ಇಬ್ಬರು ಅವರೆಲ್ಲಾ ಚಾಕು ದೊಣ್ಣೆ ತೆಗೆದುಕೊಂಡು ಬಂದಿದ್ದನ್ನು ನೋಡಿ ಪೋಲೀಸ್ ಠಾಣೆಗೆ ದೂರು ಕೊಡಲು ಆಗಲೇ ಮಂಡ್ಯದ ಬಸ್ಸು ಹತ್ತಿಬಿಟ್ಟಿದ್ದರು.

ನಾವು ಯಾರು ಏನೇ ಹೇಳಿದ್ರೂ ಹೋಟೆಲ್ ಬಿಟ್ಟು ಹೊರಗೆ ಬರಲೇ ಇಲ್ಲ. "ನಮಗೆ ತಿಂಡಿ ಕೊಟ್ರೆ ಮಾತ್ರ ಎದ್ದು ಹೊರಗೆ ಹೋಗ್ತೇವೆ ಇಲ್ಲಾಂದ್ರೆ ಪ್ರಾಣ ಹೋದ್ರೂ ಇಲ್ಲಿಂದ ಕದಲೊಲ್ಲ" ಅಂತ ಸ್ಪಷ್ಟವಾಗಿ ಹೇಳಿಬಿಟ್ಟೆವು. ಇನ್ನೂ ಅರ್ಧ ಗಂಟೆ ಕಳೀತು. ಹೋಟ್ಲಿನ ಹೊರ್ಗೆ ಜನಗಳ ಜಾತ್ರೆಯೇ ಸೇರುತ್ತಿತ್ತು. ಅಷ್ಟರಲ್ಲಿ ಮಂಡ್ಯದಿಂದ ಪೋಲೀಸ್ ವ್ಯಾನೊಂದು ಬಂದು ಹೋಟೆಲ್ ಮುಂಭಾಗ ನಿಂತುಕೊಂಡಿತು. ಪೋಲೀಸ್‌ನವರನ್ನು ಕಂಡೊಡನೆಯೇ ಜನರೆಲ್ಲಾ ಚದುರತೊಡಗಿದರು. ಆಗ ಇನ್ಸ್‌ಪೆಕ್ಟರ್ ಆಗಿದ್ದ ಹಿರೇಮಠ್ ರವರು ನಮ್ಮ ಹತ್ತಿರ ಬಂದು ಏನೇನು ನಡೆಯಿತೆಂದು ಕೇಳಿ ಎಲ್ಲವನ್ನು ತಿಳಿದುಕೊಂಡರು. ಹೋಟೆಲ್‌ಗೆ ಬೀಗ ಹಾಕಿಸಿ ಹೋಟೆಲ್‌ನ ಮಾಲೀಕರನ್ನು ಬಂಧಿಸಿ ಜೊತೆಯಲ್ಲಿ ಕರೆದುಕೊಂಡು ಹೋದರು. ಹಾಗೆಯೇ ಇನ್ನೆರಡೂ ಹೋಟೆಲ್‌ಗಳಿಗೂ ಖುದ್ದಾಗಿ ಇನ್ಸ್‌ಪೆಕ್ಟರ್ ಹಿರೇಮಠ್ ರವರೇ ಭೇಟಿ ಕೊಟ್ಟು ಅವರಿಗೂ ಎಚ್ಚರಿಕೆ ನೀಡಿ ಯಾರೇ ಬಂದು ಕಾಫಿ ತಿಂಡಿ ಕೇಳಿದರೂ ಕೊಡಬೇಕು ಇಲ್ಲವಾದರೆ ಹೋಟೇಲ್ ಬಾಗಿಲು ಮುಚ್ಚಿಕೊಂಡು ಮನೆಗೆ ಹೋಗಿ ಎಂದು ಹೇಳಿ ಹೊರಟುಹೋದರು. ಆ ದಿನವೇ ನಾವು ಇನ್ನುಳಿದ ಎರಡು ಹೋಟೆಲ್‌ನಲ್ಲೂ ಕಾಫಿ-ತಿಂಡಿ ಮಾಡಿದೆವು. ಮತ್ತೆ ಪ್ರತಿದಿನವೂ ಹೋಟೆಲ್‌ಗೆ ಹೋಗಿ ಬರುತ್ತಿದ್ದೆವು. ಗಲಾಟೆ ಮಾಡಿದ ಗಣೇಶ್ ಭವನ್ ಹೋಟೆಲ್ ಮಾತ್ರ ಒಂದು ವಾರದವರೆಗೂ ಬಾಗಿಲು ತೆಗೆಯಲಿಲ್ಲ. ಅವರ ಮಾಲೀಕನಿಗೆ ಅಸ್ಪೃಶ್ಯತಾ ಕಾನೂನಿನ ಪ್ರಕಾರ ಕೋರ್ಟಿನಲ್ಲಿ ಕೇಸು ಹಾಕಲಾಗಿತ್ತು. ಒಂದು ವಾರದ ನಂತರ ಗಣೇಶ್ ಭವನ್ ಹೋಟೆಲ್ ಎಂದಿನಂತೆ ಬಾಗಿಲು ತೆಗೆದಾಗ ಮತ್ತೆ ನಾನು ನನ್ನ ಗೆಳೆಯರಾದ ಗುರುಸ್ವಾಮಿ, ಶಿವಾನಂದ, ಶಿವಣ್ಣ ಮತ್ತು ಪಂಚಲಿಂಗಯ್ಯ ಹೋಟೆಲ್‌ಗೆ ಹೋಗಿ ತಿಂಡಿ ಕೇಳಿದಾಗ ಒಂದು ವಾರದ ಹಿಂದೆ ನಮಗೆ ತಿಂಡಿ ಕೊಡಲು ನಿರಾಕರಿಸಿದ್ದ ಸಪ್ಲೈಯರೇ ನಮಗೆ ತಿಂಡಿ ತಂದು ಕೊಟ್ಟನು. ಕಾಫಿ ಕುಡಿದು ನಾವು ಹೊರಗೆ ಬಂದೆವು. ಆಗ ಪ್ರತಿದಿನ ಯುವಕರೇ ಹೋಟೆಲ್‌ಗೆ ಹೋಗುತಿದ್ದೆವು, ಆದರೆ ಈಗ ನಮ್ಮ ಕೇರಿಯ ಹಿರಿಯರೂ ಧೈರ್ಯವಾಗಿ ಹೋಟೆಲ್‌ಗೆ ಹೋಗಿ ಕಾಫಿ ಕುಡಿದು ಬರುತ್ತಿದ್ದಾರೆ. ಇತ್ತೀಚೆಗೆ ನಮ್ಮ ಯುವಕರು ದೇವಸ್ಥಾನಕ್ಕೂ ಹೋಗಿ ಬರುತ್ತಿದ್ದಾರೆ. ನಮ್ಮ ಕೇರಿಯ ಹೆಂಗಸರೂ, ಹಿರಿಯರೂ ಮತ್ತು ಮಕ್ಕಳೂ ದೇವಸ್ಥಾನಕ್ಕೆ ಹೋಗಿ ಬರುವ ಕಾಲ ಬಹಳ ದೂರವೇನೂ ಇಲ್ಲ. ದಲಿತ ಯುವಕರು ಸಂಘಟಿತರಾಗಿ ಧೈರ್ಯವಾಗಿ ತಲೆ ಎತ್ತಿ ನಿಂತಿದ್ದೇ ಆದರೆ ನಾವೂ ಕೂಡ ಈ ಸಮಾಜದಲ್ಲಿ ಸಮಾನತೆಯಿಂದ ಗೌರವಯುತವಾಗಿ ಬದುಕಬಹುದೆಂದು ನನಗೆ ಸ್ಪಷ್ಟವಾಗಿ ಅನ್ನಿಸಿದೆ.

ಚಂದ್ರಶೇಖರ್ ತಲೆಮೇಲೆ ಮಲಹೊರ್ಸಿದ್ರೆ ಗೊತ್ತಾಗ್ತಿತ್ತು!

ಪ್ರತಿಕ್ರಿಯೆ

ಮೂರು ಸಂಚಿಕೆಗಳ ಹಿಂದೆ ಪ್ರಕಟವಾದ ''ಚಂದ್ರಶೇಖರ್ : ದಲಿತರ ಕುಸಿದನಂಬಿಕೆ'' ಎಂಬ ವರದಿ ಓದಿ ನನ್ನ ಮನಸ್ಸಿನಲ್ಲಿ ಯಾವ ರೀತಿಯ ಪ್ರತಿಕ್ರಿಯೆಯೂ ಹೊರಬೀಳಲಿಲ್ಲ. ಸರಿಯಾಗೆ ಹೇಳಿದ್ದಾರೆ ಎನಿಸಿತು. ಅಸ್ಪೃಶ್ಯನಲ್ಲದವನೊಬ್ಬನ ನಿಜವಾದ ಒಳನೋಟ ಇದೆ ರೀತಿ ಇರುವುದರಲ್ಲಿ ಯಾವ ಸಂದೇಹವು ಇಲ್ಲ. ಪ್ರತಿಯೊಬ್ಬ ಅಸ್ಪೃಶ್ಯನ ಪ್ರತಿಕ್ರಿಯೆ ನನ್ನ ಪ್ರತಿಕ್ರಿಯೆಗಿಂತ ಭಿನ್ನವಿರುವುದಿಲ್ಲವೆಂದೇ ನನ್ನ ದೃಢವಾದ ನಂಬಿಕೆ.

ಹೊನ್ನಾಪುರರವರು ಚಂದ್ರಶೇಖರ್ ಮೇಲೆ ಏನು ನೋಡಿ ನಂಬಿಕೆ ಇಟ್ಟಿದ್ದರೊ ನನಗೆ ಅರ್ಥವಾಗುತ್ತಿಲ್ಲ.

ಪ್ರಪಂಚದ ಕೆಲವೆ ದೊಡ್ಡ ವ್ಯಕ್ತಿಗಳ ಸಾಲಿಗೆ ಸೇರಿದ ಗಾಂಧಿ ಆಡಿದ ಸೋಗಲಾಡಿತನದ ನಾಟಕವನ್ನು ಇನ್ನೂ ಕೆಲವರು ನಿಜವೆಂದೇ ನಂಬಿದ್ದಾರೆ. ''ಅಸ್ಪೃಶ್ಯತೆ ತೊಲಗಲಿ ವರ್ಣಾಶ್ರಮ ಇರಲಿ'' ಎಂದು ಒದರಿ ದೇಶದ ದೊಡ್ಡನಾಯಕರೆನಿಸಿಕೊಂಡರು. ಈ ರೀತಿ ಮಾತಾಡದಿದ್ದರೆ ನಾಯಕರಾಗುವುದಾದರು ಹೇಗೆ? ಒಂದು ಸಮೂಹದ ಜನಾಂಗದಅನುಕಂಪ ಪಡೆಯುವುದಾದರು ಹೇಗೆ? ಬಹುಶಃ ಚಂದ್ರಶೇಖರ್ ಕಣ್ಣೀರುಸುರಿಸಿ ದಲಿತರ ಅನುಕಂಪಕ್ಕೆ ಪಾತ್ರರಾಗಬಹುದಿತ್ತು. ಆದರೆ ಆ ರೀತಿ ಯಾರೇ ಸುರಿಸಿದರೂ ನಿಜಾಂಶ ಸದ್ಯಕ್ಕೆ ತಿಳಿಯುವಷ್ಟರ ಮಟ್ಟಕ್ಕೆ ದಲಿತರು ಜಾಗ್ರತಗೊಂಡಿದ್ದಾರೆ.

''ಅಸ್ಪೃಶ್ಯತೆ ತೊಲಗಲಿ ವರ್ಣವಿರಲಿ'' ಎನ್ನುವ ಗಾಂಧಿ ಮಾತಿನ ಹಿಂದೆ ಎಷ್ಟು ದೊಡ್ಡ ಅಸ್ಪೃಶ್ಯತೆ ಉಳಿಸಿಕೊಳ್ಳುವ ಕಪ್ಪುಕಥೆ ಅಡಗಿದೆ ಎನ್ನುವುದನ್ನು ಆ ಕಾಲದಲ್ಲಿ ಅರ್ಥಮಾಡಿಕೊಳ್ಳುವುದು ಕಷ್ಟವಾಗಿತ್ತು. ಆದರೆ ಅಂಬೇಡ್ಕರ್ ಇದೆಲ್ಲವನ್ನು ಪೂರ್ವಾಬಾವಿಯಾಗಿ ತಿಳಿದು ಹುರಿಯ ತೊಡಗಿದ್ದರು. ಇದೆಲ್ಲವನ್ನು ತಿಳಿಸಿ ದಲಿತರನ್ನು ಜಾಗ್ರತೆಗೊಳಿಸುವ ಮಟ್ಟಕ್ಕೆ ದಲಿತ ಪ್ರಜ್ಞೆ ಬೆಳೆದಿರಲಿಲ್ಲ.

ಗಾಂಧಿಯೊಮ್ಮೆ ಯರವಾಡ ಜೈಲಿನಲ್ಲಿದ್ದಾಗ ಸಣ್ಣ ತಪ್ಪುಮಾಡಿದ. ಅಸ್ಪೃಶ್ಯನೊಬ್ಬನನ್ನು ಬ್ರಿಟೀಷ್ ಅಧಿಕಾರಿಯೊಬ್ಬರು ಕೆಲಸದಿಂದ ಹೊರ ಹಾಕಿದರು. ಕೆಲವು ದಿನಗಳ ನಂತರ ಅಸ್ಪೃಶ್ಯ, ಅಧಿಕಾರಿಯ ಮುಂದೆ ಅಂಗಲಾಚಿಕೊಂಡಾಗ ಅಧಿಕಾರಿ ಮತ್ತೆ ಕೆಲಸ ನೀಡಿದ. ಇದರಿಂದ ಕುಪಿತಗೊಂಡ ಗಾಂಧಿ ಸತ್ಯಾಗ್ರಹ ನಡೆಸಿದರು ಏನೆಂದು ಗೊತ್ತೆ? ಮತ್ತೆ ಕೆಲಸ ನೀಡಿರುವುದು ನ್ಯಾಯಸಮ್ಮತವಲ್ಲವೆಂದು. ಇದು ಗಾಂಧಿ ಅಸ್ಪೃಶ್ಯರ ಬಗ್ಗೆ ಇಟ್ಟುಕೊಂಡಿದ್ದ ಗೌರವ. ಇನ್ನು ಪಟ್ಟಿಮಾಡಿದರೆ ಸಾವಿರಾರು.

ಗಾಂಧಿಯೇ ಆ ಗತಿ ಎಂದರೆ ಚಂದ್ರಶೇಖರ್, ವಾಜಪೇಯಿ ಇನ್ಯಾರೆ ಅಧಿಕಾರಕ್ಕೆ ಬಂದರೂ ದಲಿತರ ಸ್ಥಿತಿ ಉತ್ತಮಗೊಳ್ಳುವುದಿಲ್ಲ. ಆ ರೀತಿ ನಾವ್ಯಾರಾದರು ನಂಬಿದರೆ ಅದು ನಮ್ಮ ಕಡು ಮೂರ್ಖತನವೇ ಹೊರತು ...ಮತ್ತೇನು ಅಲ್ಲ.

ಚಂದ್ರಶೇಖರ್‌ರವರು ಜಾತಿ ಮತ್ತು ದಲಿತರ ಮೇಲೆ ನಡೆಯುವ ದೌರ್ಜನ್ಯಕ್ಕೆ ಸಂಬಂಧವಿಲ್ಲವೆಂದಿದ್ದಾರೆ. ಇದು ಒಂದು ರೀತಿಯಲ್ಲಿ ಸರಿ ಎನಿಸುತ್ತದೆ. ''ಕರಡಿಗೆ ರೋಮ ಯಾವುದು ಶ್ಯಾಟ ಯಾವುದು ಎನ್ನುವಂತಿದೆ''. ದೌರ್ಜನ್ಯ ಎಂದರೆ ಅಸ್ಪೃಶ್ಯರು, ಅಸ್ಪೃಶ್ಯರೆಂದರೆ ದೌರ್ಜನ್ಯ ಎರಡು ಒಂದೆ ತಾನೆ...?

''ಅಸ್ಪೃಶ್ಯತೆ ತಾನು ನೋಡೆಯಿಲ್ಲ ಎಂದಿದ್ದಾರೆ''. ಈ ಮಾತು ನನ್ನಲ್ಲಿ ಬಹಳ ಮುಜುಗರ ಹುಟ್ಟಿಸಿದೆ. ಚಂದ್ರಶೇಖರ್‌ರವರೊಬ್ಬ ಅಸ್ಪೃಶ್ಯರಾಗಿದ್ದರೆ ಈ ಮಾತಿಗೆ ಉತ್ತರ ಅವರಲ್ಲೇ ಸಿಗುತ್ತಿತ್ತು. ಅವರನ್ನು ಸವರ್ಣೀಯನೊಬ್ಬ ಮನೆಯಾಚೆ ನಿಲ್ಲಿಸಿದ್ದರೆ....ಪೊರಕೆ ತೆಗೆದುಕೊಂಡು ಬೀದಿ ಗುಡಿಸಿದ್ದರೆ....ತಲೆ ಮೇಲೆ ಹೇಲು ಹೊರಿಸಿದ್ದರೆ ದಣಿಯನೊಬ್ಬನ ಥಡಿ ಏಟು ತಿಂದಿದ್ದರೆ... ಕುಂಟೆಯಲ್ಲಿ ನೀರು ಕುಡಿಯುವಾಗ ಒದ್ದು ಓಡಿಸಿದ್ದರೆ ಗೊತ್ತಾಗುತ್ತಿತ್ತು ಅಸ್ಪೃಶ್ಯತೆ ಅಂದರೆ ಏನು ಅನ್ನುವುದು.

ಅಸ್ಪೃಶ್ಯರ ಸ್ಥಿತಿಗತಿ ಅಸ್ಪೃಶ್ಯರಿಗೆ ಮಾತ್ರ ಗೊತ್ತಿರುತ್ತೆ ಹೊರತು ಬೇರೆಯವರಿಗೆ ಗೊತ್ತಾಗುವುದಾದರು ಹೇಗೆ....? ಅಸ್ಪೃಶ್ಯರ ಬಗ್ಗೆ ನಿಜವಾದ ಹಿತಚಿಂತಕರಾಗಬೇಕಾದರೆ ಅವನು ನಮ್ಮ ಮಧ್ಯದಿಂದಲೆ ಹುಟ್ಟಬೇಕು. ಆಗ ಮಾತ್ರ ನಮ್ಮ ಸುತ್ತಮುತ್ತಲಿನ ಸ್ಥಿತಿಗಳ ಅರಿವು ಪರಸ್ಪರ ಹೊಂದಿಕ್ಕೊಂಡು ಅದಕ್ಕೊಂದು ರೂಪ ಸಿಗುತ್ತದೆ.

ಇದಕ್ಕಿಂತ ಮಿಗಿಲಾಗಿ ಇಷ್ಟೆಲ್ಲ ಸಮಾಜ ಬಹಿಷ್ಕಾರಗಳನ್ನು ಸಹಿಸಿಕೊಂಡು ನಾವು ಬೇರೊಬ್ಬರ ಅನ್ನವನ್ನು ಕೂತು ಕಸಿಯುತ್ತಿಲ್ಲ. ನಮ್ಮ ಅನ್ನವೆ ನಮಗೆ ದೂರವಾಗಿದೆ. ಆದರಿಂದ ಯಾವ ಬೋಳಿ ಮಗನ ಅನುಕಂಪ, ಅಧಿಕಾರ, ಆಡಳಿತ, ನಮಗೆ ಬೇಕಾಗಿಲ್ಲ. ನಾವು ಸಹಿಸುವುದೂ ಇಲ್ಲ.

—ಎಂ. ವೆಂಕಟಸ್ವಾಮಿ

ಅಸ್ಪೃಶ್ಯರೆಲ್ಲರೂ ಮಾತ್ರ ದಲಿತರು

ಪಂಚಮದ ''ಅಂಬೇಡ್ಕರ್ ನೆನಪಿನ ಸಂಚಿಕೆ'' ಯಲ್ಲಿ ಶ್ರೀ ಪೋಲಂಕಿಯವರ 'ಹರಿಜನ-ದಲಿತರು' ಅಭಿಪ್ರಾಯ ಓದಿದೆ. ಮಾನ್ಯ ಪೋಲಂಕಿಯವರು ಪ್ರತಿಪಾದಿಸಿದ 'ದಲಿತ'ದ ಬಗ್ಗೆ ನನಗೆ ಸಹ ಅಭಿಪ್ರಾಯವಿದೆ. ಇನ್ನಿತರ ಎಲ್ಲ ಪದಗಳಿಗಿಂತ 'ದಲಿತ' ಎಂಬುದೆ ಹೆಚ್ಚು ಯೋಗ್ಯವಾದುದು.

ದಲಿತ ಎಂಬ ಪದಕ್ಕೆ ಬಂಡಾಯ ಸಾಹಿತ್ಯ ಸಂಘಟಕರು ಮತ್ತು ಇತರ ಕೆಲವರು 'ಶೋಷಿತ' ಎಂಬ ಅರ್ಥ ನೀಡಿದ್ದಾರೆ. ಅವರ ಪ್ರಕಾರ ಎಲ್ಲಾ ಜಾತಿಗಳಲ್ಲೂ ಶೋಷಿತರಿರುತ್ತಾರೆ. ಅವರೆಲ್ಲ 'ದಲಿತ' ವ್ಯಾಪ್ತಿಯಲ್ಲೇ ಬರುತ್ತಾರೆ ಎಂದು. ಆದರೆ ಇದು ಸರಿಯಲ್ಲ. ಅಸ್ಪೃಶ್ಯರ ಶೋಷಣೆ ಆರ್ಥಿಕ ಮಟ್ಟದ್ದು. ಇನ್ನು ಕೆಲ ಕೆಳಜಾತಿಯ ಶೂದ್ರರು ಧಾರ್ಮಿಕ-ಸಾಮಾಜಿಕ ರೀತಿಯಲ್ಲೂ ಶೋಷಣೆಗೆ ಒಳಗಾಗಿರುವುದು ಸತ್ಯವೇ ಆದರೂ ಅಸ್ಪೃಶ್ಯರಿಗಾದ ಅವಮಾನವೀಯ ಅಪಮಾನ-ಹಿಂಸೆ ಅವರದ್ದಾಗಿಲ್ಲ. ಆದ್ದರಿಂದ 'ದಲಿತ' ಪದದ ಅರ್ಥ ಯಾವ ಜನಾಂಗ (ಜಾತಿ) ಆರ್ಥಿಕ ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕವಾಗಿ ಬಹಿಷ್ಕೃತರು ಅಥವಾ ಶೋಷಣೆಗೊಳಗಾದವರು ಎಂಬುದೇ ಸೂಕ್ತ.

ಇನ್ನು 'ಹೊಲೆಮಾದಿಗರು' ಎನ್ನುವುದಕ್ಕಿಂತ 'ದಲಿತ' ಎನ್ನುವುದು ಸಾಮಾಜಿಕವಾಗಿಯೂ ಹೆಚ್ಚು ಸೂಕ್ತ. ಯಾಕೆಂದರೆ ಅಸ್ಪೃಶ್ಯರಲ್ಲಿ ಹೊಲೆಮಾದಿಗರು ಮಾತ್ರ ಬರದೆ, ನಮ್ಮ ಕಡೆ (ಉತ್ತರ ಕನ್ನಡ) ಇರುವ 'ಮುಕ್ರಿ' ('ಹಳೀರು', ಆಗೇರು' ಎಂದೂ ಅನ್ನುತ್ತಾರೆ) ಜಾತಿಯವರು ಸಹ ಅಸ್ಪೃಶ್ಯರೇ ಆಗಿದ್ದಾರೆ. ಅವರು 'ಸೆಡ್ಯುಲ್ಡ್ ಕ್ಯಾಸ್ಟ್' ಪಟ್ಟಿಯಲ್ಲೂ ಬರುತ್ತಾರೆ. ದಲಿತ ಅನ್ನುವ ಪದದಲ್ಲಿ ಇವರು ಹಾಗೂ ಇತರ ಅಸ್ಪೃಶ್ಯ ಜಾತಿಗಳೂ ಸಹ ಸಮಾವೇಶವಾಗುತ್ತಾರೆ. ಆದ್ದರಿಂದ ಪೋಲಂಕಿಯವರು ಪ್ರತಿಪಾದಿಸಿದ ''ದಲಿತ'' ಪದ ಸಮರ್ಪಕವಾಗಿದೆ.

—ಆರ್. ವಿ. ಭಂಡಾರಿ

ಹರಮುಘಟ್ಟದ ದಲಿತರು ಎದುರಿಸಿದ ಜಾತ್ಯಾಂಧರ ಹಲ್ಲ

ದಲಿತರು ಶತಶತಮಾನಗಳಿಂದ ಮೂಲಭೂತ ಅವಶ್ಯಕತೆಗಳಾದ ಅಸನ, ವಸನ ಮತ್ತು ವಸತಿಗಳಿಂದ ವಂಚಿತರಾಗಿ ಮೇಲ್ಜಾತಿಯವರಿಂದ ಮತ್ತು ಉಳ್ಳವರಿಂದ ತುಳಿಸಿಕೊಳ್ಳುತ್ತ ಬಂದಿರುವುದರ ಜೊತೆಗೆ ಮಳೆ, ಚಳಿ, ಬಿಸಿಲೆನ್ನದೆ ಹಗಲಿರುಳು ವಿಶ್ರಾಂತಿಯಿಲ್ಲದೆ ದುಡಿದು ಪ್ರತಿಫಲವಾಗಿ ಮೋಸ, ವಂಚನೆ, ದೌರ್ಜನ್ಯಗಳನ್ನು ಸ್ವೀಕರಿಸುತ್ತ ಬಂದಿರುವುದನ್ನು ಇತಿಹಾಸದ ಪುಟಗಳಲ್ಲಿ ಕಾಣಬಹುದು. ಶೋಷಣೆಯನ್ನು ಸಹಿಸಲಸಾಧ್ಯವಾದಾಗ ಸಹಿಸಲಾರೆವು ಎಂದೊಡನೆ ಸಾಮೂಹಿಕವಾಗಿ ಜೀವ ಸಹಿತ ಬೂದಿಯಾದ ಮತ್ತು ರಕ್ತದ ಕೋಡಿ ಹರಿದಿರುವ ಕಗ್ಗೊಲೆಗಳು ನಡೆಯುತ್ತ ಬಂದಿವೆ. ಇದಕ್ಕೆ ಬೆಲ್ಚಿ, ಸಾಧುಪುರ, ದೇವ್ಲೋಲಿ ಮುಂತಾದ ಹತ್ಯಾಕಾಂಡಗಳೇ ಸಾಕ್ಷಿಯಾಗಿವೆ.

ಶಿವಮೊಗ್ಗದಿಂದ 10 ಕಿ. ಮೀ. ದೂರದಲ್ಲಿರುವ ಹರಮುಘಟ್ಟ ಗ್ರಾಮದಲ್ಲಿ ದಿನಾಂಕ 17–4–83 ರಂದು ದಲಿತರನ್ನೂ ಮಾರಿಗೆ ಬಲಿಕೊಡುವ. ಗುಡಿಸಲುಗಳನ್ನು ಬೂದಿ ಮಾಡುವ ಅವಕಾಶವು ಕೂಡಿ ಬಂದು ಸಫಲವಾಗಲಿಲ್ಲ. ಆದರೂ ಇದು ನಡೆಯುವ ಕಾಲ ಬಹಳ ದೂರವಿಲ್ಲ. ಈ ಊರಿನಲ್ಲಿ 600 ಕ್ಕೂ ಹೆಚ್ಚು ಕುಟುಂಬಗಳಿರುವ ಬಹು ಸಂಖ್ಯಾತರಾದ ಲಿಂಗಾಯ್ತರು 50 ಕುಟುಂಬಗಳಿರುವ ಮಾದಿಗರು ಮತ್ತು 70 ಕುಟುಂಬಗಳಿರುವ ವಡ್ಡರ ಮೇಲೆ ಸುಮಾರು ವರ್ಷಗಳಿಂದಲೂ ಹಗೆ ಸಾದಿಸುತ್ತ ಬಂದಿದ್ದಾರೆ. ಮಾದಿಗರು ಮತ್ತು ವಡ್ಡರನ್ನು ಪಶುವಿಗಿಂತಲೂ ಕೀಳಾಗಿ ಕಾಣುವುದರ ಜೊತೆಗೆ ಜೀತ ಮಾಡಿಸಿ ಕೊಳ್ಳುತ್ತಿದ್ದರು. ಆದರೆ 1975ರಲ್ಲಿ ಜೀತವಿಮೋಚನಾ ಕಾಯ್ದೆಯನ್ವಯ ಜೀತ ಬಿಟ್ಟ ಕಾರಣಕ್ಕಾಗಿ ದಲಿತರಮೇಲೆ ಲಿಂಗಾಯ್ತರು ಬಹಿಷ್ಕಾರವಮಾಡಿದ್ದರು. ನಂತರ ದಲಿತರು ಸ್ವಂತ ದುಡಿಮೆ ಮಾಡಿಕೊಳ್ಳುತ್ತ ಬದುಕುವುದನ್ನು ಸಹಿಸಲಾರದೆ ಲಿಂಗಾಯ್ತರು ದಲಿತರನ್ನು ಬಗ್ಗು ಬಡಿಯಲು ಸಮಯ ಕಾಯುತ್ತಿದ್ದರು.

ಮಾದಿಗರ ಕೇರಿಗೆ ಸಂಚುಮಾಡಿ ಆಗಿಂದಾಗ್ಗೆ ಬೆಂಕಿಯಿಡುತ್ತ ಬಂದು ಅವರನ್ನು ಸುಮಾರು 15 ವರ್ಷಗಳ ಹಿಂದೆ ಊರಿಂದ ಹೊರಗೆ ಅಟ್ಟಿದರು. 41 ನಿವೇಶನವಿರುವ ಈ ಭೂಮಿಯನ್ನು ಲಿಂಗಾಯ್ತರ ಕೈಯಲ್ಲಿರುವ ಪಂಚಾಯ್ತಿ ವಶಪಡಿಸಿಕೊಂಡಿತು. ಗುಡಿಸಲು ಕಟ್ಟಿಕೊಂಡು ವಾಸಮಾಡುವ ಸಲುವಾಗಿ ಈ ಭೂಮಿ ಬೇಕೆಂದು ಮಾದಿಗರು ದಿನಾಂಕ 8 – 10 – 79 ರಂದು ಕೇಳಲು ಹೋಗಿ ಒದೆ ತಿಂದು ಜಿಲ್ಲ ಅಧಿಕಾರಿಗಳ ಕಛೇರಿಯ ಮುಂದೆ ಮೂರು ತಿಂಗಳು ಸತ್ಯಾಗ್ರಹ ಮಾಡಿದರು. ನಂತರ ಉಪವಿಭಾಗಾಧಿಕಾರಿಗಳು ಪರಿಶೀಲನೆ ಮಾಡಿ ಇದು ಮಾದಿಗರ ಭೂಮಿ ಎಂದು ತೀರ್ಪು ನೀಡಿದರು. ಪಂಚಾಯ್ತಿಯವರು ಬೆಂಗಳೂರಿನ ವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ಅಪೀಲು ಹೋದಾಗಲೂ ಉಪವಿಭಾಗಾಧಿಕಾರಿಗಳ ತೀರ್ಮಾನ ಸರಿ ಎಂದು ವಿಭಾಗಾಧಿಕಾರಿಗಳ ನ್ಯಾಯಲಯ ತೀರ್ಪು ನೀಡಿತು. ನ್ಯಾಯಾಲಯಗಳಿಂದಲೂಗೆದ್ದು ಕೊಂಡಬಂದ ಮಾದಿಗರ ಮೇಲೆ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದರು.

ಸುಮಾರು 40 ವರ್ಷಗಳ ಹಿಂದೆ ಒಬ್ಬ ಜಮೀನುದಾರನಿಂದ ಭೂಮಿಯನ್ನು ದಾನವಾಗಿ ಪಡೆದು ವಡ್ಡರು ಗುಡಿಸಲುಗಳನ್ನು ಹಾಕಿಕೊಂಡು ವಾಸಿಸುತ್ತ ಬಂದಿದ್ದಾರೆ ಈ ಭೂಮಿ ಪಂಚಾಯ್ತಿಗೆ ಸೇರಿದೆ ನೀವು ಇಲ್ಲಿಂದ ಖಾಲಿ ಮಾಡಿರಿ ಎಂದು ಪಂಚಾಯ್ತಿಯವರು ವಡ್ಡರಿಗೆ ಕಿರುಕುಳ ಕೊಡುತ್ತಿರುವುದರಿಂದ ಮಾದಿಗರು ವಡ್ಡರ ಪರ ವಾದಿಸುತ್ತಿರುವುದು ಲಿಂಗಾಯ್ತರಿಗೆ ನುಂಗಲಾರದ ತುತ್ತಾಗಿದೆ.

ಚಂದ್ರಪ್ಪ

ಈ ಗ್ರಾಮದಲ್ಲಿ ದೇವರ ಹೊಲದಿಂದ, ಸಗಣಿ ಹರಾಜಿಂದ, ಹುಣಸೆ ಮರದಿಂದ, ಗೂಳಿಹರಾಜಿಂದ, ದಂಡ ದೋಷದಿಂದ ಮತ್ತು ಇತರ ಮೂಲಗಳಿಂದ ವರ್ಷಕ್ಕೆ ಸುಮಾರು 15 ಸಾವಿರ ರೂಪಾಯಿಗಳ ಆದಾಯವಿದ್ದು ಇಲ್ಲಿಯವರೆಗೂ ಲಿಂಗಾಯ್ತ ಮುಖಂಡರ ಪಾಲಾಗುತ್ತಿದೆ. ಇದನ್ನರಿತ ದಲಿತರು ಪಂಚಾಯ್ತಿ ಕಟ್ಟೆ ಹತ್ತಿ ಹಣಕಾಸಿನ ಲೆಕ್ಕವನ್ನು ಕೇಳಿದರು ಜೊತೆಗೆ ಎಲ್ಲ ಜಾತೀಯ ಸದಸ್ಯರಿಂದ ಕೂಡಿದ ಗ್ರಾಮ ಕಮಿಟಿಯನ್ನು ಮಾಡಿ ನೊಂದಾಯಿಸಬೇಕು. ಕಮಿಟಿಯ ತೀರ್ಮಾನದಂತೆ ಹಣಕಾಸಿನ ವ್ಯವಹಾರವನ್ನು ಮಾಡಬೇಕು ಎಂದು ಒತ್ತಾಯ ಪಡಿಸಿದ್ದು ಲಿಂಗಾಯ್ತರ ಕೋಪ ನೆತ್ತಿಗೇರಿಸಿತ್ತು.

ಲಿಂಗಾಯ್ತರ ವಶದಲ್ಲಿರುವ ಹನುಮಂತ ದೇವರನ್ನು ಕೂಡ್ಲಿ ಜಾತ್ರೆಯಾದ ಮರುದಿನಊರನ್ನೆಲ್ಲ ಮೆರವಣಿಗೆ ಮಾಡುವುದು ರೂಡಿಯಲ್ಲಿತ್ತು. ಆದರೆ ಈ ಸಾರಿ ದಿನಾಂಕ 16–4–83 ರಂದು ಇತರರ ಕೇರಿಗೆ ದೇವರನ್ನು ಕಳುಹಲಿಲ್ಲ. ವಡ್ಡರ ಜನರು ತಮ್ಮ ಕೇರಿಯಲ್ಲಿ ಮೆರವಣಿಗೆ ಮಾಡುವ ಸಲುವಾಗಿ ದೇವರನ್ನು ಕೇಳಲು ಹೋದಾಗ ಲಿಂಗಾಯ್ತರಿಂದ ಚೆನ್ನಾಗಿ ಥಳಿಸಲ್ಪಟ್ಟರು. ವಡ್ಡ ಸಹಾಯಕ್ಕೆ ಮಾದಿಗರು ದಾವಿಸಿದಾಗ ಲಿಂಗಾಯ್ತರು ಪರಾರಿಯಾಗಿದ್ದರು. ನಂತರ ಪೋಲಿಸಿಗೆ ದೂರು ನೀಡಿದಾಗ ಸಬ್‌ಇನ್ಸ್‌ಪೆಕ್ಟರಾದ ಶಿ ಮೂರ್ತಿಯವರು ಲಿಂಗಾಯ್ತ ಕೋಮಿನವರಾಗಿದ್ದು ಸ್ವಜನ ಪಕ್ಷಪಾತವನ್ನು ತೋರಿಸಿದರು.

ಈ ಎಲ್ಲ ಕಾರಣಗಳಿಂದ ಮಾದಿಗರನ್ನು ಮತ್ತು ವಡ್ಡರನ್ನು ಕೊಚ್ಚಿಹಾಕಬೇಕೆಂದು ಹಲ್ಲು ಮಸೆಯುತ್ತ ಕಾಲು ಕೆದರಿ ಜಗಳ ತೆಗೆಯಲು ಶುರು ಮಾಡಿದರು. ದಿನಾಂಕ 17-4-83 ರಂದು ಬೆಳಿಗ್ಗೆ 9 ಘಂಟೆಯಲ್ಲಿ ನೀರಿನ ಟ್ಯಾಂಕಿನ ಬಳಿ ಉದ್ದೇಶಪೂರ್ವಕವಾಗಿ ಜಗಳ ತೆಗೆದು ದಲಿತರ ಪರವಾಗಿರುವ ಲಿಂಗಾಯ್ತರ ಹುಡುಗನಾದ ಪಂಚಾಕ್ಷರಿಗೆ ದೊಡ್ಡೇರಿ ಹನುಮಂತಪ್ಪ, ಹಳಕಪ್ಪರರಾಜ ಮಹೇಶ ಇವರು ಹೊಡೆದರು. ಇದನ್ನು ಕಂಡು ಬಿಡಿಸಲು ಹೋದ ವಡ್ಡರ ಹುಡುಗರಿಗೂ ಹೊಡೆಯಲು ಹೋದಾಗ ವಡ್ಡರಜನರು ಎಲ್ಲರೂ ಸೇರಿ ಜಗಳಕ್ಕೆ ಹೋದರು.

ಪಟೇಲ ಮಾಲಿಂಗಪ್ಪ, ಈಟರ ದೇವೇಂದ್ರಪ್ಪ. ಚೇರ್ಮನ್ ತೀರ್ಥಪ್ಪ ಮತ್ತು ಗಂಗಾಧರಪ್ಪ ಮುಂತಾದವರ ನೇತೃತ್ವದಲ್ಲಿ ಸುಮಾರು 1000 ಜನರ ಗುಂಪು ಮಾದಿಗರ ಮತ್ತು ವಡ್ಡರ ಕೇರಿಗೆ ಬೆಂಕಿ ಹಚ್ಚಿ ರಕ್ತದಕೋಡಿ ಹರಿಸಿ ಬರಬೇಕೆಂದು ಕೊಡ್ಲಿ ಕಂದ್ಲಿ, ದೊಣ್ಣೆ ಮುಂತಾದ ಆಯುದಗಳನ್ನು ಹಿಡಿದು ಕೆಂದೂಳು ಕೆದರಿ ಆರ್ಭಟಿಸುತ್ತ ಬಂದಿತು. ಇದನ್ನು ಕಂಡಾಗ ದಲಿತರು ಕಂಗಾಲಾದರು. ಹೆಂಗಸರು ಮತ್ತು ಮಕ್ಕಳು ಬೀತಿಯಿಂದ ಲಬಲಬನೆ ಬಾಯಿ ಬಡಿದುಕೊಳ್ಳುತ್ತಿದ್ದರು. ಇವರ ಬಲಿ ಕುರಿಗಳಾಗಿ ಬಾಳುವುದಕ್ಕಿಂತ ಹೋರಾಡಿಮಡಿಯುವುದೇ ಲೇಸೆಂದು ಜೀವದಾಸೆಯಿಲ್ಲದೆ ವೀರಾವೇಶದಿಂದ ಹೋರಾಡಲು ಪ್ರಾರಂಭಿಸಿದಾಗ, ಕಲ್ಲುಗಳ ಮುಂದೆ ಕೊಡಲಿ, ಮಚ್ಚು, ದೊಣ್ಣೆಗಳ ಆಟ ನಡೆಯಲಿಲ್ಲ. ಕೊನೆಗೆ ಬಂದೂಕಗಳನ್ನು ತರಲು ಹೋದರು. ಅಷ್ಟರಲ್ಲಿ ಪೋಲಿಸ್ ಪಡೆ ಬಂದು ಕದನಕ್ಕೆ ತೆರೆ ಎಳೆಯಿತು. ಇವರೆಲ್ಲರ ಮೇಲೆ 107 ವಿಧಿಯ ಕೇಸನ್ನು ಹಾಕಲಾಗಿದೆ.

ಪೋಲೀಸ್ ಪಡೆ ನೇಮಿಸುವುದರಿಂದ ಕೇಸು ಹಾಕುವುದರಿಂದ ಅಲ್ಪ ಸಂಖ್ಯಾತರಾದ ದಲಿತರ ರಕ್ಷಣೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಘನ ಸರ್ಕಾರ ಈ ಸಮಸ್ಯೆಯನ್ನು ಅಂತ್ಯಗೊಳಿಸುವತ್ತ ಕಾರ್ಯಪ್ರವೃತ್ತವಾಗಬೇಕು.

ಕೊಟ್ಟ ಮಾತಿನಂತೆ ಇಟ್ಟ ದಿಟ್ಟ ಹೆಜ್ಜೆ

ರೈತರಿಗೆ ೩೬ ಕೋಟಿ ರೂ. ರಿಯಾಯಿತಿಗಳ ಘೋಷಣೆ

1. ನೀರಾವರಿ ಯೋಜನೆಗಳಿಂದ ರೈತರಿಗೆ ನೀರನ್ನು ಒದಗಿಸಿದ ನಿರ್ದಿಷ್ಟ ದಿನದಿಂಧ 5 ವರ್ಷಗಳ ಅವಧಿಯವರೆಗೆ ನೀರಿನ ದರವನ್ನು ಅವರು ಕೊಡಬೇಕಾಗಿಲ್ಲ.

2. ಸರ್ಕಾರದಿಂದ ತೆಗೆದುಕೊಂಡಿರುವ ಪ್ರವಾಹ ಸಾಲ, ಕುರಿ ಸಾಲ, ಗೊಬ್ಬರ ಸಾಲ, ಹಣ್ಣು ಹಂಪಲು ಸಾಲ, ಸಬ್ಸಿಡಿ ಸಾಲ, ಚಿನಿವಾರರಿಗೆ ಸಾಲ, ಮೇವು ಸಾಲ, ಗ್ರಾಮೀಣ ಜನಶಕ್ತಿ ಸಾಲ, ಸಿಡಿಪಿ ಸಾಲ, ಭೂಮಿಯನ್ನು ಕೃಷಿಯೋಗ್ಯಗೊಳಿಸುವ ಬಗ್ಗೆ ಸಾಲ, ಕೃಷಿಗೆ ಅಲ್ಪಾವಧಿ ಸಾಲ, ಕೃಷಿ ಸಾಲ, ಭೂ ಅಭಿವೃದ್ಧಿಗೆ ಸಾಲ, ತಕಾವಿ ಸಾಲ ಮುಂತಾದ ಸಾಲಗಳನ್ನು ಮನ್ನಾ ಮಾಡಲಾಗಿದೆ.

3. ನೀರು ಬರದ ಬಾವಿಗಳ ಸಂಬಂಧದಲ್ಲಿ ನೀಡಲಾಗಿದ್ದ ಸಾಲವನ್ನು ಮನ್ನಾ ಮಾಡುವ ಬಗ್ಗೆ ಗೊತ್ತುಪಡಿಸುವ ಕಾರ್ಯ ವಿಧಾನದ [illegible] ಕಾಲಮ್ಮ ಯನ್ನು ತೆಗೆದು ಹಾಕುವುದು.

4. ಭೂ ಸಾರ ಸಂರಕ್ಷಣೆಗಾಗಿ ಮತ್ತು ಬದುಗಳ ನಿರ್ಮಾಣಕ್ಕಾಗಿ ಕೊಟ್ಟಿರುವ ಸಾಲದ ಪೈಕಿ 50 ರಷ್ಟನ್ನು ಮೂರು ಸಮಾನ ಕಂತುಗಳಲ್ಲಿ ರೈತರು ಸಂದಾಯ ಮಾಡಿದರೆ ಬಾಕಿ ಕೊಡಬೇಕಾಗಿರುವ ಮೊತ್ತದಲ್ಲಿ ಶೇ.50ರಷ್ಟು ಮೊತ್ತದಮನ್ನಾ ಮಾಡಲಾಗಿದೆ.

5. ಪೋಲೀಸ್ ಗೋಲಿಬಾರಿನಲ್ಲಿ ಮಡಿದ ರೈತರ ಪತ್ನಿಯರು ಮತ್ತು ಅವಲಂಬಿಗಳಿಗೆ, ವಾರ್ಷಿಕ ಆದಾಯವು 6000 ಕ್ಕಿಂತ ಕಡಿಮೆ ಇರುವವರಿಗೆ 100 ರೂ. ಯ ತಾತ್ಪೂರ್ತಿಕ ಮಾಸಿಕ ಪರಿಹಾರವನ್ನು ನೀಡಲಾಗುವುದು.

6. ಸಹಕಾರಿ ಸಾಲಗಳ ಮರು ಪಾವತಿಯಲ್ಲಿ ರಿಯಾಯಿತಿ.

7. 30-6-1983 ರವರೆಗೆ ಸುಸ್ತಿ ಬಡ್ಡಿ ಮನ್ನಾ ಮಾಡಲಾಗಿದೆ.

ಪ್ರಕಟಣೆ : ವಾರ್ತಾ ಮತ್ತು ಪ್ರಚಾರ ಇಲಾಖೆ
ಕರ್ನಾಟಕ ಸರ್ಕಾರ

KRNN 106 PANCHAMA Fortnightly 20, May 1983 Reg. No. 2561-76

ಗೋರಿ ಕಲ್ಲಾಗಬೇಕು

ಬರಡು ಮಣ್ಣಿನಲಿ ಬಂಗಾರ ಹುಡುಕಿ
ಬರಗಾಲದ ಬಂಡೆಗಳಲಿ ಅನ್ನ ತಡುಕಿ
ದುಡಿದವರೊಡಲ ಪತಾಕೆ ನೆಡಲು
ನಾ ಬಂದೆ ಗೆಳತಿ
ಕತ್ತಲು ಕಾಣದೆ
ಸಿರಿವಂತರ ಬಣ್ಣದ ತಂಪು ನೀರು
ಬೆಳೆಮ ಮರವಾಗಿ ಫಲ ಕೊಟ್ಟವರ
ನೆನಪಿಸಲು ನಿನ್ನಲ್ಲಿಗೆ ನಾ ಬಂದೆ ಗೆಳತಿ
ಬೆಂದ ಮನಸ್ಸು ಕರಕಲಾದ ಹೃದಯ ಮಾಂಸ
ಕ್ಷಯಕ್ಕೆ ಬಲಿಯಾಗಿ ಹಾಳಾಗುವುದ
ಕಂಡು ಸಮಾನತೆಯ ಗುಲಾಬಿ ರಸವ
ಕೊಟ್ಟು ಸುಖ ಕಾಣಿಸಲೆಂದು
ನಾ ಬಂದೆ ಗೆಳತಿ
ಧರ್ಮ ಪತಾಕೆಯ ಸುಟ್ಟು ಕೆಂಪು ಪತಾಕೆಯ
ದುಡಿವ ಜನಗಳೆದೆ ಮೇಲೆ
ಫಲ ಹೂ ಕಾಣಲು ಬಂದೆ
ನದಿನೀರಿನೊಂದಿಗೆ ನಾನಾಗಿ ಬೆಳೆದೆ
ಬೆಳೆಯ ಬೆಳಸಿದ ಚಂದ-ನಗು
ನಾ ಕಳಕೊಂಡೆ ಜೀತಗಾರನಾಗಿ
ಬುರುಡೆಯಲಿ ಸ್ನಾನ ಆಕಾಶದ ಬಾರ
ತಲೆ ಮೇಲೆ ಹೊತ್ತ ಕೃಷಿಯ ಕಲೆಯಲಿ
ಗದ್ದೆಯೆ ನಾನಾದೆ ನನ್ನದೆಯ ಚಕ್ಕಳದಿ
ಆದರೂ ನನದೊಂದು ಆಸೆ
ಗೋರಿಯಾ ಕಲ್ಲಾಗಬೇಕು ಮಣ್ಣಾಗಬೇಕು
[illegible]

—ಗಂಗಾರಾಂ ಚಂಡಾಳ

ನಾ ಕಂಡ ಜಾಗ್ರತಿ ದಿನಾಚರಣೆ

ಏಪ್ರಿಲ್ ಒಂದನೇ ತಾರೀಖು ವಿಶ್ವದ ಜನರೆಲ್ಲ ದಡ್ಡರ ದಿನವೆಂದು ಒಬ್ಬರನ್ನೊಬ್ಬರು ದಡ್ಡರನ್ನಾಗಿಸಲು ಹವಣಿಸುತ್ತಿರುತ್ತಾರೆ. ಒಂದು ರೀತಿಯಲ್ಲಿ ಇದು ಮನುಷ್ಯ ಸದಾ ಜಾಗರೂಕನಾಗಿರಬೇಕೆಂದು ಹೇಳುವಂತಿರುತ್ತದೆ. ಇದೇ ತಿಂಗಳು ಇನ್ನೂ ಹದಿಮೂರು ದಿನಗಳು ಕಳೆದರೆ, ಭಾರತದೇಶದ ದಲಿತರಿಗೆ ಏಕೆ ವಿಶ್ವದಲ್ಲಿ ಅತ್ಯಂತ ಕೀಳು ಬದುಕು ನಡೆಸಿ ಉಳ್ಳವರ ದೌರ್ಜನ್ಯಕ್ಕೊಳಪಟ್ಟಿರುವ ಜನತೆಗೆ. "ನೀವು ಸದಾಜಾಗರೂಕರಾಗಿರದೆ, ವಿದ್ಯಾವಂತರಾಗದೆ, ಸಂಘಟಿತರಾಗದೆ; ಹೋರಾಟಮಾಡದೆ ಬೇರೆಯವರಿಂದ ಮುಕ್ತಿ ಸಾಧ್ಯವಿಲ್ಲ" ಎಂದು ಕರೆಕೊಟ್ಟ ಇಂತಹ ದಾಸ್ಯದಿಂದ ಬಿಡಿಸಿಕೊಳ್ಳುವ ಮಾರ್ಗವನ್ನು ತೋರಿದ ದಲಿತಸೂರ್ಯ ಹುಟ್ಟಿದ ದಿನ (ಏಪ್ರಿಲ್ 14) ಈ ಸೂರ್ಯ ಹುಟ್ಟಿ ಈ ವರ್ಷಕ್ಕೆ (83ಕ್ಕೆ) 92 ವರ್ಷಗಳು ಕಳೆದವು. ದಲಿತರ ಬದುಕಿನಲ್ಲಿ ಪೂರ್ಣಬೆಳಕನ್ನು ಚೆಲ್ಲುವ ಮುನ್ನವೆ ಈ ಸೂರ್ಯ ಮುಳುಗಿ ದಲಿತರ ಬಾಳಲ್ಲಿ ಕತ್ತಲು ಕವಿಯ ತೊಡಗಿದಾಗ ಆತನ ಆದರ್ಶ ತತ್ವಗಳು ದಲಿತರ ಸಂಘಟನೆಯ ರೂಪದಲ್ಲಿ [illegible] ಹುಟ್ಟುತ್ತಿರುವುದನ್ನು ಜಾತಾ[illegible] ಕಣ್ಣುಮುಚ್ಚಿ ಕೂರಲಾರದೆ ಕಣ್ಣು ಬಿಟ್ಟು ನೋಡಲಾರದೆ, ಆತಂಕಗೊಂಡು ದಲಿತರ ಬಾಳಲ್ಲಿ ಹೊಸಹೊಸ ಬಗೆಯ ಕಿರುಕುಳವನ್ನು ಕೊಡತೊಡಗಿದ್ದಾರೆ.

ತುಮಕೂರು ಎನ್. ಆರ್. ಕಾಲೋನಿ, ಕುರಿಸಿಪಾಳ್ಯ, ಜೈಪುರ, ಮೆಳೆಕೋಟೆಗಳಲ್ಲಿ ಮೂಟೆ ಹೊತ್ತು ಉಳ್ಳವರ ಮನೆ ಬೀದಿಗಳ ಕಸಗುಡಿ ಹೊಟ್ಟೆ ತುಂಬಿಕೊಳ್ಳುವ ಜನ ಈ ವ ವಿಭಿನ್ನ ರೀತಿಯಲ್ಲಿ ಡಾ॥ಅಂಬೇಡ್ಕರ್‌ರ ಜನ್ಮಾ ರಣೆಯನ್ನು ಮಾಡಿದರು. ಈ ವರ್ಷದ ಉಗಾ ಹಬ್ಬ ದಲಿತರಿಗೆ ಬರದೆ ಅಂಬೇಡ್ಕರ್ ಜಯಂ ಬಂದಂತಿತ್ತು ಅಲ್ಲಿನ ದೃಶ್ಯ. ಅಂಬೇಡ್ಕರ್ ಸ್ವಾ ಗಳ ರೂಪದಲ್ಲಿ ಪ್ರತಿಮನೆಯ ಮುಂದು ಬಂ ಕುಳಿತು ಸಂಘಟಿತರಾಗಿ ಎಂದು ಕೂಗಿ ಹೇಳುತ್ತಿ ವಂತಿತ್ತು. ಆರು ಘಂಟೆಗೆ ಯುವಕರೆಲ್ಲ ಎನ್. ಆ ಕಾಲೋನಿಯಲ್ಲಿ ಹೊಸ ರೀತಿಯ ಮೆರವ ನಡೆಸಿದಾಗ ಬರಿ ಮಾರಮ್ಮನ ದೇವಸ್ಥಾನ ಹೆಂಡದ ಘಟೆಯ ಮೆರವಣಿಗೆಯನ್ನು ಕ ಬೀದಿ ಮತ್ತು ಬೀದಿಯಜನ ಪ್ರತಿ ಬೀದಿಯ ಸಿಹಿ ಹಂಚುತ್ತ, ಅವರು ಕೂಗುವ ಘೋಷಣ ಳಿಗೆ ಧ್ವನಿ ಗೂಡಿಸುತ್ತ, ಅವರು ಹೇಳ ಹಾಡುಗಳನ್ನು ಒಕ್ಕೂರಲಿನಿಂದ ಹಾಡಿ ಮೆರ ಣಿಗೆಯಲ್ಲಿ ಸೇರಿಕೊಳ್ಳುತ್ತಿದ್ದರು.

ಇಂತಹ ದೃಶ್ಯಗಳನ್ನು ಕಂಡು ಎಂತಹ ಹೃ ಯವೂ ಪುಳಕಿತಗೊಳ್ಳುತಿತ್ತು. ಈ ದೃಶ್ಯಗ ಇನ್ನು ಕಣ್ಣು ಮುಂದೆ ಮಾಸಿಹೋಗುವ ಮು 18-4-83 ರಂದು ಬಸ್ಸಿನಲ್ಲಿ ನಡೆದ ಸಂಭಾಷ ನಾನಿರುವ ಜಾಗವನ್ನೇ ಮರೆತು ಜಿಂದಾಬಾದ್... ಜಿಂದಾಬಾದ್... ಅಂಬೇಡ್ಕರಗೆ ಜಿಂದಾಬಾ ಎಂದು ಕೂಗುವಂತೆ ಮಾಡಿತ್ತು.

—ರಾಮಯ್ಯ ಬಿ. ಗೊಲ್ಲ

ನೆಲೆಗಾಗಿ ಹೋರಾಟ

(ಮೊದಲ ಪುಟದಿಂದ)

ಗಿರುವ ಭೂಮಿಯನ್ನು ಮಾರುವುದು ಮತ್ತು ಕೊಳ್ಳುವುದು ಎರಡೂ ತೀವ್ರ ಅಪರಾಧ. ಆದರೆ ಭೂಮಿಕೊಂಡ ರಂಗಸ್ವಾಮಿ ಅಧಿಕಾರಿಗಳಿಗೆ ಎಂಜಲು ತಿನ್ನಿಸಿ ಕಾನೂನಿನ ಕಣ್ಣಿಗೆ ಮಣ್ಣೆರಚಿ ಭೂಮಿಯನ್ನು 1981 ರಿಂದಲೂ ಅನುಭವಿಸತೊಡಗಿದ. ಬಾವಿತೆಗೆಸಿ ಪಂಪ್‌ಸೆಟ್ ಹಾಕಿಸಿ ತೆಂಗಿನಗಿಡಗಳನ್ನು ನೆಟ್ಟು ತೋಟಮಾಡಿ ಬೇಲಿಹಾಕಿದ.

ಸರ್ಕಾರ ಮತ್ತೆ ಎರಡನೇ ಬಾರಿಗೆ 8-4-82 ರಂದು ನಾರಾಯಣಪ್ಪನ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳಲಾಗಿದೆ ಎಂದು ಗೆಜೆಟ್‌ನಲ್ಲಿ ಪ್ರಕಟಿಸಿತು. ಇದನ್ನು ನಾರಾಯಣಪ್ಪ ಕೋರ್ಟಿನಲ್ಲಿ ಪ್ರಶ್ನಿಸಿದ. ಆದರೆ ಪ್ರಶ್ನೆ ನಿಲ್ಲಲಿಲ್ಲ. ಭೂಮಿಕೊಂಡಿದ್ದ ರಂಗಸ್ವಾಮಿಯೂ ಕೋರ್ಟಿನಲ್ಲಿಪ್ರಶ್ನಿಸಿದ. ಭೂಮಿ ಕೊಳ್ಳಲು ಮತ್ತು ಅನುಭವಿಸಲು ಯಾವುದೇ ಹಕ್ಕು ಇಲ್ಲದಿದ್ದ ಈತನ ಪ್ರಶ್ನೆಯೂ ನಿಲ್ಲದೆ ರಂಗಸ್ವಾಮಿಗೆ ತೀವ್ರ ಮುಖಭಂಗವಾಯಿತು. ಈಗ ಈ ಯಾವ ಸ್ಟೇ ಇತ್ಯಾದಿ ತಡೆ ಇಲ್ಲದಿರುವುದರಿಂದ ಅಧಿಕಾರಿಗಳು ಬಡಜನರಿಗೆ ಸೈಟುಗಳನ್ನು ಹಂಚಿಕೊಡಬೇಕಾಗಿತ್ತು. ಆದರೆ ಎಂಜಲು ತಿನ್ನಿಸುವುದರಲ್ಲಿ ಪಳಗಿದ್ದ ರಂಗಸ್ವಾಮಿ ಅಧಿಕಾರಿಗಳು ಮತ್ತು ಪೋಲೀಸರನ್ನು ಬುಟ್ಟಿಗೆ ಹಾಕಿಕೊಂಡು ಸೈಟ್‌ಗಳ ಭೂಮಿಯಲ್ಲಿ ತಳವೂರಲು ಹವಣಿಸಿದ. ತಿಮ್ಮಸಂದ್ರದ ಬಡಜನರು ತಮಗೆಹಂದಿಗೂಡೇ ಗತಿ ಎಂದುಕೊಂಡರು.

ಆದರೆ ದಲಿತ ಸಂಘರ್ಷ ಸಮಿತಿ ಈ ನಿರಾಶೆಗೆ ತೆರೆ ಎಳೆಯಿತು. ಕಾನೂನು ಪ್ರಕಾರ ರಂಗಸ್ವಾಮಿ ಈ ಭೂಮಿ ಮೇಲಿರುವುದು ಅಪರಾಧ ಎಂದು ಜನರಿಗೆ ತಿಳಿಸಿತು. ಅಧಿಕಾರಿ ಮತ್ತು ಪೋಲೀಸಿಗೆ ಎಚ್ಚರಿಸಿತು. ಆದರೆ ಪ್ರಯೋಜನವಾಗಲಿಲ್ಲ. ಅನಿವಾರ್ಯವಾಗಿ ಎಲ್ಲ ಬಡಜನರು ದಲಿತ ಸಂಘರ್ಷ ಸಮಿತಿ ಅಡಿಯಲ್ಲಿ ಒಂದಾಗಿ ದಿನಾಂಕ 8-5-1983 ರಂದು ರಂಗಸ್ವಾಮಿ ಹಾಕಿದ್ದ ಬೇಲಿಯನ್ನು ಸತ್ತು ರಾತ್ರೋರಾತ್ರಿ ಆ ಭೂಮಿ ಮೇಲೆ ಗುಡಿಸಲುಗಳನ್ನು ಏಳಿಸಿದರು. ಮತ್ತೆ ಕುಪಿತಗೊಂಡ ರಂಗಸ್ವಾಮಿ ತನ್ನ ನಾಯಿಯಂತೆ ಇಟ್ಟುಕೊಂಡಿದ್ದ ಪೋಲೀಸನ್ನು ಛೂ ಬಿಟ್ಟ. ರಂಗಸ್ವಾಮಿ ಭೂಮಿ ಅನುಭವಿಸುವುವನ್ನು ಕಾನೂನು ವಿರುದ್ಧವಾಗಿ ರಕ್ಷಿಸಿದ್ದ ಪೋಲೀಸರು ಮನೆಮನೆಗೆ ನುಗ್ಗಿ ಗು ಸಲು ಹಾಕಿದ್ದ ಬಡಜನರಿಗೆ ಚಚ್ಚಿ ರಕ್ತಬರಿಸಿದರ ಗುಡಿಸಲುಗಳನ್ನು ನಾಶಮಾಡಿದರು. ವ್ಯಾನುಗಳ ತುಂಬಿಕೊಂಡು ಹೋಗಿ ಲಾಕಪ್ಪಿನಲ್ಲಿಟ್ಟು ಕಾನ ನುಗಳನ್ನು ವ್ಯಂಗ್ಯಮಾಡಿದರು. ಆದರೆ ಜನ ಸಂಘಟನೆ ಮತ್ತು ಹೋರಾಟವನ್ನು ರಂಗಸ್ವಾ ಯ ಹಣ ಸೋಲಿಸಲಾಗಲಿಲ್ಲ. ಅರೆಸ್ಟಾದವರೆ ಲ್ಲ ಬಿಡಿಸಿಕೊಂಡಂ ಬಂದ ದಲಿತ ಸಂಘರ್ಷ ಸಮಿ ಹೋರಾಟವನ್ನು ಮುಂದುವರಿಸಿತು. ಸೈಟುಗ ನ್ನು ಬಿಡದೆ ಮತ್ತೆ ಗುಡಿಸಲು ಕಟ್ಟಿ ಸೈಟುಗ ಮೇಲೇ ಧರಣಿ ಕೂತುಕೊಂಡ ಜನರನ್ನು ಪೋಲಿ ಸರು ಅಲ್ಲಾಡಿಸಲಾಗಲಿಲ್ಲ.

ತಿಮ್ಮಸಂದ್ರದ ಎಲ್ಲಾ ಜಾತಿಯ ಬಡಜನ ನಡೆಸಿದ ಇಷ್ಟೆಲ್ಲಾ ಹೋರಾಟದಿಂದಾಗಿ ರಂ ಸ್ವಾಮಿ ಈ ಭೂಮಿ ಮೇಲಿರುವುದನ್ನು ಕಾನೂನ ಬಾಹಿರ ಎಂದುಜಾರಿಯಾಗಿದೆ. ಇಷ್ಟರ ಮಟ್ಟಿ ಬಡಜನರು ಗದ್ದಿದ್ದಾರೆ. ಆದರೆ ಕೂಡಲೆ ಈ ಭೂಮಿಯನ್ನು ಸರ್ಕಾರ ಸೈಟುಗಳಾಗಿ ಮಾಡಿ ಬ ಜನರಿಗೆ ಹಂಚುವತನಕ ಈ ಗೆಲವು ಪೂರ್ಣವಾಗ ವುದಿಲ್ಲ.

—ವಿ. ನಾಗರಾಜ

ಸಂಪಾದಕ, ಪ್ರಕಾಶಕ : ಗೋವಿಂದಯ್ಯ, ವಿನಯ ಪ್ರಿಂಟರ್ಸ್, 2514, ಕೆ. ಜಿ. ಕೊಪ್ಪಲು, ಮೈಸೂರು-14.